www.buntsanghablr.com

ಸೆಪ್ಟೆಂಬರ್ 2017 ಸಂಪುಟ 13 ಸಂಚಿಕೆ 09

# ಸ್ನೇಹ ಚಿಂತನೆ

ಮಾಸ ಪತ್ರಿಕೆ




ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ 71ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ



ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಚೌತಿ ಆಚರಣೆ

BUNTS' SANGHA BANGALORE
(A Charitable Institution)
324, Chord Road, Vijayanagar, Bengaluru - 560 040.
P : 080 - 2339 9323 / 2339 9635 E: info@buntsanghablr.com

ಸಂಚಿಕೆ ಬೆಲೆ ರೂ. 1/-






Garden City 's *Finest Boutique Hotel* Now Open


Traditional hospitality with a slick ambience


# MODERNITY WITH CLASS















ROOMS
Refresh, Relax & Relieve


DINING RESTAURANT
Indulge In Everything That Is Nice



OVERVIEW OF BANQUET HALL

Experience best-in-comfort and standards of living from the moment when you step in. Attide is the finest boutique hotel in Bangalore where exceptional indulgence awaits for you. We offer exclusive rooms and Multi-Cuisine Fine Dining with modern style Restrobar and Coffee Shop.

Attide business hotel is located very close to Jakkur Aerodrome, Yelahanka Post, Bangalore. We ensure to meet the needs of our guests by providing excellent facilities. Being the best business hotel in Bangalore, Attide blends comfort and luxury to give an unparalleled experience which makes our guests visit us again in there next trip.



Café Delicas has spacious ambiance with well-appointed interiors making it an ideal place to have best cafe experience like never before.

Urban flavours is a multi-cuisine restaurant near Bangalore international Airport



| Seating Style | Theater | Circular | U-shaped | Boardroom | Classroom |
|---|---|---|---|---|---|
| | 530 | 380 | 145 | 156 | 210 |

**ATTIDE HOTEL**, Opp Jakkur Aerodrome, Allalasandra, Yelahanka, Bangalore - 560065. Phone: 080 2217 7177 I Email: info@attidehotels.com I www.attidehotels.com

nadhicreations@gmail.com

ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 13 SEPTEMBER 2017 ISSUE 09**

**ಸಾಹಿತ್ಯ - ಪ್ರಕಾಶನ ಸಮಿತಿ**

ಅಧ್ಯಕ್ಷರು :
**ಎಸ್. ಅಶೋಕ್‌ಕುಮಾರ್ ಶೆಟ್ಟಿ**

ಗೌ॥ ಸಂಪಾದಕರು:
**ರವಿರಾಜ್ ಎಸ್. ಶೆಟ್ಟಿ**

ಸಲಹಾ ಮಂಡಳಿ:
**ಶ್ರೀ ಬಿ.ಎಲ್.ಎನ್. ಹೆಗ್ಡೆ**
**ಶ್ರೀ ಎ. ಗಿರೀಶ್ ರೈ**
**ಶ್ರೀ ಎಂ. ರತ್ನಾಕರ್ ಶೆಟ್ಟಿ**
**ಶ್ರೀ ಸಂತೋಷ್ ಶೆಟ್ಟಿ**

ಸಂಪಾದಕ ಮಂಡಳಿ:
**ಶ್ರೀ ಎನ್. ಗೋಪಾಲ ಶೆಟ್ಟಿ**
**ಶ್ರೀ ಚಂದ್ರಶೇಖರ್ ಆಳ್ವ**
**ಶ್ರೀ ಪ್ರಕಾಶ್ ಶೆಟ್ಟಿ. ಎಂ**
**ಶ್ರೀಮತಿ ರಾಜಶ್ರೀ. ಕೆ. ಶೆಟ್ಟಿ**

ಪೋಷಕ ಸದಸ್ಯರು:
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು
**ಸಂತೋಷ್ ಶೆಟ್ಟಿ. ಜೆ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕ**

## ಒಳ ಪುಟಗಳಲ್ಲಿ...

| | | **ಪುಟ** |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌ॥ ಕಾರ್ಯದರ್ಶಿ ವರದಿ | 4 |
| 4. | BSRNSV Independence Day-Report | 5 |
| 5. | **ಇವರು ನಮ್ಮವರು** – ಡಾ॥ ಸುಭಾಶ್ಚಂದ್ರ ಶೆಟ್ಟಿ ಬಿ. | 7 |
| 6. | 'ಶಹೀದ್ ಭಗತ್ ಸಿಂಗ್' ಒಂದು ನೆನಪು | 9 |
| 7. | ಡೆಂಗ್ಯೂ ಜ್ವರದಂತಹ ಮಹಾಮಾರಿಯ... | 11 |
| 8. | ಗಣೇಶ ಚತುರ್ಥಿ ಆಚರಣೆ | 22 |
| 9. | The Secret of having a Better Life | 24 |
| 10. | Matrimonial Services | 30 |

**ಮುಖಪುಟ**

**ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ**
**71ನೇ ಸ್ವಾತಂತ್ರ್ಯೋತ್ಸವದ ಆಚರಣೆ**
**ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ**
**ಚೌತಿ ಆಚರಣೆಯ ಸಂಭ್ರಮ**



# ಸಂಪಾದಕೀಯ

ಯಾವುದೇ ಸಂಘ ಸಂಸ್ಥೆಗಳಲ್ಲಿ ಭಿನ್ನಾಭಿಪ್ರಾಯಗಳು ಪರ–ವಿರೋಧಗಳು ಹೊಸತಲ್ಲ. ಅದು ಪ್ರಜಾಪ್ರಭುತ್ವದ ಆಶಯ ಕೂಡ. ಎಲ್ಲರಿಗೂ ತಮ್ಮದೇ ಅಭಿಪ್ರಾಯಗಳಿರುತ್ತದೆ ಅವುಗಳನ್ನು ಅಭಿವ್ಯಕ್ತಿ ಪಡಿಸಲು ಸಂವಿಧಾನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೊಡ ಮಾಡಿದೆ. ಆದರೆ ಯಾಕೋ ಇತ್ತೀಚೆಗೆ ವಿರೋಧಕ್ಕಾಗಿ ವಿರೋಧ ಕಂಡು ಬರುತ್ತಿದೆ. ತಮಗೆ ಅನುಕೂಲವಾದಾಗ ಎಲ್ಲವೂ ಸರಿ ಎನಿಸುತ್ತವೆ. ಪ್ರತಿಕೂಲವಾದಾಗ ಅನುಚಿತ ಎನಿಸುತ್ತವೆ. ಇತ್ತೀಚಿನ ವರ್ಷಗಳಲ್ಲಿ ಸಂಘದ ಚುನಾವಣೆಗಳು ತೀರಾ ವೈಯುಕ್ತಿಕ ನೆಲೆಗೆ ತಲುಪಿರುವ ಪರಿಣಾಮವಾಗಿ ನಾವು–ಅವರು ಎಂಬ ಗುಂಪುಗಳ ಸೃಷ್ಟಿಗೆ ಕಾರಣವಾಗಿದೆ. ಗುಂಪಿನಲ್ಲದವರನ್ನು ಎದುರಾಳಿಗಳೆಂಬ ಮನೋಭಾವ ನಾವಿಂದು ಕಾಣುತ್ತಿದ್ದೇವೆ. ಇದೇ ರೀತಿ ಮುಂದುವರೆದರೆ ಸಂಘದ ಏಕತೆ ಮತ್ತು ಸಮಗ್ರತೆಗೆ ಮಾರಕವಾಗುವುದಂತೂ ಸತ್ಯ.


ಸಂಘದ ಯಾವ ನಿರ್ಧಾರಗಳು ವೈಯುಕ್ತಿಕವಾಗಿರುವುದಿಲ್ಲ. ಮಹಾಸಭೆಯ ನಿರ್ದೇಶನದಂತೆ ನಡೆಯುವುದು ಎಲ್ಲರಿಗೂ ತಿಳಿದಿರುವ ವಿಚಾರ. ಪ್ರತಿಯೊಂದು ನಿರ್ಧಾರವೂ ಪ್ರತಿಯೊಬ್ಬರಿಗೂ ಒಪ್ಪಿತವಾಗಲಾರದು. ಆದರೆ ಪ್ರತಿಯೊಬ್ಬ ಸದಸ್ಯರಿಗೂ ಮಹಾಸಭೆಯಲ್ಲಿ ತನ್ನ ಅಭಿಪ್ರಾಯವನ್ನು ಪ್ರತಿಪಾದಿಸುವ ಹಕ್ಕು ಇದ್ದೇ ಇದೆ. ಎಲ್ಲವೂ ನಮ್ಮ ಮೂಗಿನ ನೇರಕ್ಕೆ ನಡೆಯಬೇಕೆಂಬ ಧೋರಣೆಯಿಂದ ಕೆಲವರು ಹತಾಶ ಸ್ಥಿತಿಗೆ ತಲುಪಿರುವುದು ಬೇಸರದ ಸಂಗತಿ. ಕಳೆದ ೬೦ ವರ್ಷಗಳಿಂದ ಹಲವಾರು ಅಧ್ಯಕ್ಷರು ಸಂಘವನ್ನು ಅಭಿವೃದ್ಧಿಯತ್ತ ಮುನ್ನಡೆಸಿದರೂ ಕೆಲವರು ತಮ್ಮ ಸಾಮರ್ಥ್ಯದ ಮೂಲಕ ಹೆಜ್ಜೆ ಗುರುತುಗಳನ್ನು ಮೂಡಿಸಿರುವುದು ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ. ಆದರೂ ಈ ಸುಧೀರ್ಘ ಅವಧಿಯಲ್ಲಿ ಸಮಾಜದ ಆಗಾಧದತೆ ಮತ್ತು ವಿಶೇಷ ಶಕ್ತಿ ಸಾಮರ್ಥ್ಯವನ್ನು ಗುರುತಿಸಿ ಯಾವ ವೇಗದಲ್ಲಿ ಅಭಿವೃದ್ಧಿಯತ್ತ ಕೊಂಡೊಯ್ಯಬೇಕಿತ್ತೋ ಅದು ಸಾಧ್ಯವಾಗದೇ ಇರುವುದು ಈ ಪರ–ವಿರೋಧಗಳ ಧೋರಣೆಯೇ ಎಂಬುವುದು ಕಟು ಸತ್ಯ. ಇನ್ನಾದರೂ ಯಾವುದೇ ಪದವಿ, ಸ್ವಹಿತಾಸಕ್ತಿಯ ಪ್ರಭಾವಕ್ಕೆ ಒಳಗಾಗದ ಸ್ವತಂತ್ರ ಚಿಂತನೆಯ ಹಿರಿಯರು ಈ ದಿಸೆಯಲ್ಲಿ ಗಂಭೀರ ಚಿಂತನ–ಮಂಥನ ಮೂಲಕ ಸಮತೋಲನ ವಾತಾವರಣ ನಿರ್ಮಿಸುವಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ.

ಸಮಾಜದ ಹಿರಿಯರಾದವರ ನಡೆ ಸಂಘದ ಘನತೆ ಗೌರವಕ್ಕೆ ಚ್ಯುತಿ ತರಬಾರದು. ಹಿರಿತನದಲ್ಲಿ ಸಣ್ಣತನವನ್ನು ಯಾರೂ ನಿರೀಕ್ಷಿಸಲಾರರು. ಸಂಘ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಹಿರಿಯರ ಮಾರ್ಗದರ್ಶನ ಇಂದಿನ ತುರ್ತು ಅಗತ್ಯವಾಗಿದೆ. ಪದವಿ ಅಧಿಕಾರದ ಬಯಕೆಗೆ ವಯಸ್ಸಿನ ಮಿತಿಯಿಲ್ಲ. ಆದರೆ ಅವುಗಳ ಬಗೆಗಿನ ಸಂಮ್ಮೋಹಕತೆ ನಮ್ಮ ದೌರ್ಬಲ್ಯವಾಗಬಾರದು. ಬಿಟ್ಟೆನೆಂದರೂ ಬಿಡದೀ ಈ ವ್ಯಾಮೋಹ... ಯಾರನ್ನೂ ಕಾಡದಿರಲಿ. ಹೊಸ ತಲೆಮಾರಿನ ಮೇಲೆ ನಂಬಿಕೆ, ವಿಶ್ವಾಸವಿರಿಸಿ ಭವಿತವ್ಯದ ಕನಸುಗಳ ಸಾಕಾರಕ್ಕೆ ಎಲ್ಲಾ ಭೇದಗಳನ್ನು ಮರೆತು ಒಗ್ಗೂಡುವ ಮನಸ್ಸುಗಳು ಹೆಚ್ಚಾಗಲಿ. ಅನಗತ್ಯವಾಗಿ ತಪ್ಪನ್ನು ಹುಡುಕುವ ವ್ಯರ್ಥ ಪ್ರಯತ್ನದ ಬದಲು ಗುಣಕ್ಕೆ ಮತ್ಸರ ಉಂಟೇ?! ಎನ್ನುವ ಸೌಹಾರ್ದ ಭಾವನೆ ಎಲ್ಲರಲ್ಲಿ ಮೂಡಲಿ. ಎಲ್ಲರಿಗೂ ನವರಾತ್ರಿಯ ಶುಭಾಶಯಗಳು.

ವಂದನೆಗಳೊಂದಿಗೆ.

**ರವಿರಾಜ್ ಎಸ್. ಶೆಟ್ಟಿ**
Email: ravidani6@gmail.com

ಸಂಪಾದಕೀಯ



# ಅಧ್ಯಕ್ಷರ ನುಡಿ

ಆತ್ಮೀಯ ಸಮಾಜ ಬಾಂಧವರೇ,

೭೧ನೇ ಸ್ವಾತಂತ್ರ್ಯೋತ್ಸವ ಸಂಭ್ರಮ, ಮರೆಯಬಾರದ ಮರೆಯಲಾರದ, ತ್ಯಾಗ, ಬಲಿದಾನಗಳಿಗೆ ಮೌಲ್ಯವನ್ನು ನೀಡಿ ಹೋರಾಡಿದ ದಿವ್ಯ ಚೇತನಗಳನ್ನು ಸ್ಮರಿಸಿಕೊಳ್ಳುವ ಸುವರ್ಣಾವಕಾಶ ಒಂದೆಡೆಯಾದರೆ, ರಾಷ್ಟ್ರ ಪ್ರೇಮದ ಕಿಚ್ಚನ್ನು ಒಂದು ದಿನದ ಮಟ್ಟಿಗಾದರೂ ಹಚ್ಚುವ ಅಚಲ ನಂಬಿಕೆ ನಮ್ಮದಾಗಲಿ ಎಂದು ಹಾರೈಸುತ್ತಾ ಸ್ವಾತಂತ್ರ್ಯದ ಮಹತ್ವವನ್ನು ಮನದಾಳದಲ್ಲಿ ಸ್ಮರಿಸಿಕೊಳ್ಳೋಣ. ಹಬ್ಬಗಳ ಸಾಲಿನಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಹಾಗೂ ಗಣೇಶ ಚತುರ್ಥಿ ಯಾಂತ್ರಿಕ ಜೀವನಕ್ಕೊಂದು ಮಾಂತ್ರಿಕ ಶಕ್ತಿ ನೀಡಿ, ನಾಡಿನ ಸರ್ವ ಜನರನ್ನು ಹರ್ಷೋಲ್ಲಾಸದಿಂದ ಧಾರ್ಮಿಕ ಚಿತ್ತದತ್ತ ಕೊಂಡೊಯ್ಯದಿದೆ ಎಂದರೆ ತಪ್ಪಾಗಲಾದರು. ಬಂಟರ ಸಂಘದಲ್ಲಿ ಅತ್ಯಂತ ಭಕ್ತಿ ಭಾವಗಳಿಂದ ಗಣೇಶೋತ್ಸವದ ಆಚರಣೆ ಜರಗಿತು. ಸರ್ವ ಸದಸ್ಯರಿಗೆ ಶ್ರೀ ಗಣೇಶನ ಅನುಗ್ರಹವಿರಲಿ.

ಸಾಂಘಿಕ ಜೀವನದಲ್ಲಿ ಆರಂಭದ ದಿನಗಳನ್ನು ಬಿಟ್ಟರೆ, ಒಟ್ಟಾರೆ ಅಭಿಪ್ರಾಯಗಳು, ಸಂಘ ಬೆಳೆದಂತೆ ವಿಮುಖವಾಗುವುದು ವಿಷಾದಕರ ವಿಚಾರ. ನಮ್ಮ ಸಂಘ ಇಂದು ಸುಮಾರು ೧೨ ಸಾವಿರಕ್ಕೂ ಅಧಿಕ ಸದಸ್ಯರನ್ನು ಒಳಗೊಂಡ ಬಲಿಷ್ಠ ಸಂಘವಾಗಿದೆ. ಚಿಂತನೆಗಳು, ವಿಚಾರಧಾರೆಗಳು, ಅಭಿಪ್ರಾಯಗಳನ್ನು ಕಾಲಕ್ರಮಗಳಿಗನುಗುಣವಾಗಿ ಒರೆಗೆ ಹಚ್ಚಿದಾಗ ಭಿನ್ನಾಭಿಪ್ರಾಯಗಳು ಸ್ವಾಭಾವಿಕ. ಪ್ರತಿಯೊಬ್ಬರನ್ನು ತೃಪ್ತಿ ಪಡಿಸಲು ಸಾಧ್ಯವಾಗದೇ ಹೋದರೂ ಸಾಮಾಜಿಕ ಕಳಕಳಿ, ಸಂಘದ ಬೆಳವಣಿಗೆ, ಅಭಿವೃದ್ಧಿಯೇ ಮಾನದಂಡವಾಗಬೇಕಾದುದು ಅನಿವಾರ್ಯ.

ಸಂಘದ ಸರ್ವತೋಮುಖ ಅಭಿವೃದ್ಧಿಯಲ್ಲಿ ಒಂದೆರಡು ಪ್ರಮುಖ ವಿಚಾರಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಸಂತೋಷ ಪಡುತ್ತೇನೆ. ಪ್ರಮುಖವಾಗಿ ಸಂಘ ಹಾಗೂ ಶಾಲೆಯ ಆದಾಯದಲ್ಲಿ ಹೆಚ್ಚಳವಾಗಿದ್ದು ಸುಮಾರು ೭ ೧/೨ ಕೋಟಿ ರೂ ಹಣವನ್ನು ಬ್ಯಾಂಕ್‌ನಲ್ಲಿ ಠೇವಣಿ ಇಡಲಾಗಿದೆ. ನಮ್ಮ ವಿದ್ಯಾ ಸಂಸ್ಥೆಯಲ್ಲಿ ರ‍್ಯಾಂಕ್‌ನೊಂದಿಗೆ ಉತ್ತಮ ಮಟ್ಟದ ಫಲಿತಾಂಶ, ನಿರಂತರ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳು ಸಂಘದ ಘನತೆ ಗೌರವವನ್ನು ವೃದ್ಧಿಸಿದೆ. ಇದು ಉನ್ನತಿಯೇ-ಅವನತಿಯೇ ಎಂಬ ವಿಚಾರವನ್ನು ನಿಮ್ಮ ಚಿಂತನೆಗೇ ಬಿಡುವವನಿದ್ದೇನೆ.

ಸಂಘದ ಬೆಳವಣಿಗೆಗೆ ನೀರೆರೆಯ ಬೇಕಾದ ಅಮೂಲ್ಯ ಸಮಯ, ಕೋರ್ಟು, ಕಚೇರಿ ಅಲೆದು ವ್ಯರ್ಥವಾಗುತ್ತಿರುವುದು ಒಂದೆಡೆಯಾದರೆ, ಹೊಸತನದ ಹುಡುಕಾಟದ ದಾರಿ ಕೂಡಾ ಸುಗಮವಾಗಿಲ್ಲ. ಯಲಚಗುಪ್ಪೆ ಜಮೀನಿನ ಸಮಸ್ಯೆಗಳ ಇತ್ಯರ್ಥಕ್ಕೆ ಪ್ರಯತ್ನ ಮುಂದುವರೆದಿದೆ. ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆದರೂ, ಯಶಸ್ಸು ಸಿಗದಿರುವುದು ನೋವಿನ ಸಂಗತಿ.

ನಾವು ಮರೆತು ಹೋದರೂ ಮರೆಯಲಾರದ ಹಲವು ದಿವ್ಯ ಚೇತನಗಳು ಸಂಘದ ಬೆಳವಣಿಗೆಗೆ ಸಮರ್ಥ ನಾಯಕತ್ವ ನೀಡಿರುವ ವಿಚಾರ ತಮಗೆ ತಿಳಿದೇ ಇದೆ. ವೈಯುಕ್ತಿಕ ಕೊಡುಗೆ, ಸಂಘಟನೆ, ಧನ ಸಂಗ್ರಹಗಳ ಅಮೂಲಾಗ್ರ ಚಿಂತನ-ಮಂಥನದಿಂದ ಅಭಿವೃದ್ಧಿ ಸಾಧ್ಯವಾದುದಕ್ಕೆ ಜ್ವಲಂತ ನಿದರ್ಶನ ನಮ್ಮ ಮಹಿಳಾ ವಸತಿ ಗೃಹ ಹಾಗೆಯೇ ಶಾಲಾ ಕಟ್ಟಡದ ನಿರ್ಮಾಣ. ೨೦೦೧ರಿಂದ ನಾವು ಪ್ರಗತಿಯತ್ತ ದಿಟ್ಟ ಹೆಜ್ಜೆಯನ್ನಿಡುತ್ತಾ ಬಂದು ವಿಜೃಂಭಿಸುತ್ತಿರುವ ವಿಚಾರ ಸಹೃದಯಿ ಸದಸ್ಯರಿಗೆ ತಿಳಿದ ವಿಚಾರ.

ಚಾರಿಟೇಬಲ್ ನೀತಿಗಳಿಗನುಗುಣವಾಗಿ ನಾವಿಂದು ಕರಿಮಣಿ ವಿತರಣೆ, ಸ್ಕಾಲರ್‌ಶಿಪ್ ವಿತರಣೆ, ಜೀವನಕ್ಕಾಗಿ ಕಾಮಧೇನು ಯೋಜನೆ, ಹೊಲಿಗೆ ಯಂತ್ರ ವಿತರಣೆಯಲ್ಲಿ ಮುಂಚೂಣಿಯಲ್ಲಿದ್ದೇವೆ. ಕೋಟಿಯಲ್ಲಿ ಹಣ ಸದ್ವಿನಿಯೋಗ ಆಗಿರುವ ಸತ್ಯ ಸಂಗತಿ ತಮಗೆ ತಿಳಿದೇ ಇದೆ.

ಸದಸ್ಯರ ಸಂಖ್ಯೆ ವರ್ಷದಿಂದ ವರ್ಷಕ್ಕೆ ವೃದ್ಧಿಯಾಗಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ನೊಂದಾಯಿಸಿ ಬಂಧುಗಳಾಗಿ ಒಂದು ಸೂರಿನಡಿ ಬರುವಂತಾಗಿದೆ.

ಸಂಘದ ಬೆಳವಣಿಗೆಯ ದೃಷ್ಟಿಯಿಂದ ಬರುವ ಸಲಹೆ, ಸೂಚನೆಗಳಿಗೆ (ಪೂರ್ವಾಗ್ರಹಪೀಡಿತವಲ್ಲದ) ಸದಾ ಸ್ವಾಗತವಿದೆ. ದೃಷ್ಟಿಯಿಂದ ಸೃಷ್ಟಿ ಅಲ್ಲವೇ.........?

ನಿಮ್ಮ ಸೇವಾಕಾಂಕ್ಷಿ

**ಚಂದ್ರಹಾಸ ರೈ ಡಿ.**

ಅಧ್ಯಕ್ಷರು



ಗೌ|| ಕಾರ್ಯದರ್ಶಿ ವರದಿ

# ಗೌರವ ಕಾರ್ಯದರ್ಶಿಗಳ ವರದಿ

ಗೌರವಾನ್ವಿತ ಸದಸ್ಯರೇ,

ದಿನಾಂಕ 25.08.2017, ಶುಕ್ರವಾರದಂದು ವರಸಿದ್ಧಿ ವಿನಾಯಕ ಮಂದಿರದಲ್ಲಿ ಶ್ರದ್ಧಾಭಕ್ತಿಯಿಂದ ಗಣೇಶ ಚತುರ್ಥಿಯನ್ನು ಆಚರಿಸಲಾಯಿತು. ಪೂಜಾ ಕಾರ್ಯಕ್ರಮ, ಪ್ರಸಾದ ವಿತರಣೆ ಹಾಗೂ ಅನ್ನ ಸಂತರ್ಪಣೆಯ ನಂತರ ಡಾ। ವಿದ್ಯಾಭೂಷಣ ಸ್ವಾಮೀಜಿಯವರಿಂದ ಭಕ್ತಿಗಾನ ಸುಧೆ ಜನ–ಮನ ಸೂರೆಗೊಂಡಿತು. ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಭಕ್ತ ಮಹಾಶಯರೆಲ್ಲರಿಗೂ ಅಭಿನಂದನೆಗಳು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಶಾಲೆಯಲ್ಲಿ ಆಗಸ್ಟ್ 15 ರಂದು 71ನೇ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈಯವರು ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ Air Vice-Marshal ಬಿ.ಎ.ಕೆ. ಶೆಟ್ಟಿ ಧ್ವಜಾರೋಹಣ ನೆರವೇರಿಸಿದರು. 2017 ನೇ ಸಾಲಿನಲ್ಲಿ 10ನೇ ತರಗತಿ (ಎಸ್.ಎಸ್.ಎಲ್.ಸಿ. ಹಾಗೂ ಐ.ಸಿ.ಎಸ್.ಇ.)ಯಲ್ಲಿ ಅತ್ಯುತ್ತಮ ಅಂಕಗಳಿಸಿದ ಹಾಗೂ ಇತರ ಕ್ಷೇತ್ರಗಳಲ್ಲಿ ಅತ್ಯುನ್ನತ್ತ ಸಾಧನೆಗೈದ ವಿದ್ಯಾರ್ಥಿಗಳನ್ನು ಸ್ಮರಣಿಕೆಯೊಂದಿಗೆ ಗೌರವಿಸಲಾಯಿತು. ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಪೋಷಕರು ಉಪಸ್ಥಿತರಿದ್ದರು.

ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನದ ವತಿಯಿಂದ ದಿನಾಂಕ 22.08.2017 ರಂದು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಅಂತರ್‌ಶಾಲಾ ಸ್ಪರ್ಧೆ Quizzart-2017ನಲ್ಲಿ ನಗರದ ಸುಮಾರು 13 ಶಾಲೆಗಳ ವಿದ್ಯಾರ್ಥಿಗಳು Quiz, Graffiti, Science Model making, Soliloquy, Group Song ಮೊದಲಾದ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದರು. ದಿನಾಂಕ 01.09.2017 ರಂದು, ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾ ಹಾಗೂ ರಾಜ್ಯ ಮಟ್ಟದ ಕ್ರೀಡಾ ಸ್ಪರ್ಧೆ, ಸಿ.ಹೆಚ್.ಆರ್.ಡಿ. ಪರೀಕ್ಷೆ ಮುಂತಾದ ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ಪ್ರತಿಭೆಗಳನ್ನು ಸ್ಮರಣಿಕೆ ನೀಡಿ ಗೌರವಿಸಲಾಯಿತು. ನಮ್ಮ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಕೃತಿ ರಾಜ್ಯ ಮಟ್ಟದ ಚೆಸ್ ಸ್ಪರ್ಧೆಯಲ್ಲಿ ವಿಜೇತರಾಗಿ ಸೆಪ್ಟೆಂಬರ್ 2 ರಿಂದ 13 ರವರೆಗೆ ಬಿಹಾರದಲ್ಲಿ ನಡೆಯಲಿರುವ ರಾಷ್ಟ್ರಿಯ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವುದು ನಮ್ಮ ಸಂಸ್ಥೆಗೆ ಹೆಮ್ಮೆಯ ಸಂಗತಿ.

ಇದೇ ಮೊದಲ ಬಾರಿಗೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಸುಮಾರು 50ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಜಿಲ್ಲಾ ಹಾಗೂ ರಾಜ್ಯ ಮಟ್ಟದ ವಿವಿಧ ಕ್ರೀಡಾ ಕೂಟಗಳಲ್ಲಿ ಪದಕ ಸಾಧನೆಗೈದಿರುವುದು ಕ್ರೀಡಾ ಕ್ಷೇತ್ರದಲ್ಲಿ ಮಹತ್ತರ ಸಾಧನೆ.

ಎಲ್ಲಾ ಸಮಾಜ ಬಾಂಧವರಿಗೆ ಶರನ್ನವರಾತ್ರಿ ಹಾಗೂ ನಾಡ ಹಬ್ಬ ದಸರೆಯ ಹಾರ್ದಿಕ ಶುಭಾಶಯಗಳು. ನಾಡ ದೇವತೆ ಭುವನೇಶ್ವರಿಯು ನವ ದುರ್ಗೆ ಅವತಾರಗಳಿಂದ ನಾಡಿನ ಎಲ್ಲಾ ಸಂಕಟಗಳನ್ನು ನಿವಾರಿಸಿ ಶಿಷ್ಟರನ್ನು ರಕ್ಷಿಸಿ ಸರ್ವರಿಗೂ ಸುಖ ಶಾಂತಿ, ಸಮೃದ್ಧಿಯನ್ನು ಕರುಣಿಸಲೆಂದು ಹಾರೈಸೋಣ.

ವಂದನೆಗಳೊಂದಿಗೆ,

**ಸಂತೋಷ್ ಶೆಟ್ಟಿ ಜೆ.**
ಗೌರವ ಕಾರ್ಯದರ್ಶಿ

**BUNTS' SANGHA RNS COMPOSITE PU COLLEGE**

VIJAYANAGAR, BANGALORE – 560 040

# INDEPENDENCE DAY-REPORT




Bunts' Sangha RNS Vidyaniketan and Composite PU College witnessed a patriotic gesture on 15th August, 2017. The rains of the previous day did not deter the nationalistic spirit among the students and teachers. The institution displayed 'Unity in Diversity' by hosting an array of vibrant activities to mark the 71st year of Independence.

The Chief Guest for the day was Air Vice Marshal, B.A.K Shetty. The dias was adorned by the President of Bunts' Sangha- Sri Chandrahas Rai, Secretary of Bunts' Sangha – Sri Santosh Shetty J & Treasurer of Bunts' Sangha - Sri Anandaram Shetty. The list of invitees included the Executive Committee Members and Members of Governing Council.

The dignitaries were escorted to the flag pole by the Vice-Principal and the Members of Management. After the flag hoisting, the chief guest took the guard of honor by students of school, college and scouts and guides. Sri B.A.K Shetty spoke about his experience in the war-front and the leadership qualities a student should inculcate to become a successful leader. The President of Bunts' Sangha, Sri Chandrahas Rai encouraged the students to focus on the spirit of nationalism.

The meritorious students of 10th ICSE and State Board were felicitated with medals and certificates. Students of school and college staged varied cultural programs to depict the struggle of freedom fighters who shed their lives for the sake our country.

The celebrations culminated after the distribution of sweets and breakfast for the staff.

## ಮಹಿಳಾ ವಿಭಾಗ–ವಿಚಾರ ಸಂಕಿರಣ ಕಾರ್ಯಕ್ರಮ

ಸಂಘದ ಮಹಿಳಾ ವಿಭಾಗದ ವತಿಯಿಂದ ದಿನಾಂಕ 19.08.2017ರಂದು ಸ್ತ್ರೀಯರ ಕ್ಯಾನ್ಸರ್ ಕುರಿತು ಜಾಗೃತಿ ಹಾಗೂ ತಡೆಗಟ್ಟುವ ವಿಧಾನ ಮತ್ತು ಮೆನೋಪಾಸ್ ಸಮಸ್ಯೆಗಳು ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಖ್ಯಾತ ಸ್ತ್ರೀರೋಗ ತಜ್ಞೆ ಡಾ। ಸುಜಾತ ರವೀಂದ್ರ (ಸುಗುಣ ಆಸ್ಪತ್ರೆ) ಇವರು ಸಮಸ್ಯೆಗಳ ಬಗ್ಗೆ ವಿವಿಧ ಮಾಹಿತಿ ನೀಡಿದರು.

ಮಹಿಳೆ ಗಂಡ, ಮನೆ, ಮಕ್ಕಳ ಜವಾಬ್ದಾರಿಯಲ್ಲಿ ತನ್ನ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಾಳೆ. ಇದು ಸರಿಯಲ್ಲ. ಮಧ್ಯ ವಯಸ್ಸಿನಲ್ಲಿ ಮಹಿಳೆಯ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಅಗತ್ಯ. ಮೆನೊಪಾಸ್ ಸಮಯದಲ್ಲಿ ಮಹಿಳೆಯ ಮನಸ್ಸು ಮತ್ತು ಶರೀರ ಎರಡೂ ದುರ್ಬಲವಾಗಿರುತ್ತದೆ. ಈ ಸಮಯದಲ್ಲಿ ಮಹಿಳೆಗೆ ಉತ್ತಮ ಆರೈಕೆಯ ಅಗತ್ಯವಿರುತ್ತದೆ. ಹಾಗಾಗಿ ಮನೆಯ ಇತರ ಸದಸ್ಯರ ಸಹಕಾರವೂ ಅತ್ಯಗತ್ಯವಾಗಿರುತ್ತದೆ ಎಂದು ಡಾ। ಸುಜಾತ ರವೀಂದ್ರರವರು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಕೊನೆಯಲ್ಲಿ ಸದಸ್ಯೆಯರ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ನೀಡಿದರು.



### ಮಹಿಳಾ ವಿಭಾಗ

# ‘ದಸರಾ ಆಚರಣೆ’

**ದಿನಾಂಕ: 23.09.2017, ಶನಿವಾರ ಮಧ್ಯಾಹ್ನ 2.30ರಿಂದ**

**ಕಾರ್ಯಕ್ರಮ**

- ದೇವಿ ಪೂಜೆ
- ಲಲಿತಾ ಸಹಸ್ರನಾಮ
- ಸತ್ಸಂಗ–ಆರ್ಟ್ ಆಫ್ ಲಿವಿಂಗ್ ತಂಡದವರಿಂದ
- ದಾಂಡಿಯಾ ನೃತ್ಯ–ಸಂಘದ ಸದಸ್ಯೆಯರಿಂದ
- ನೃತ್ಯಾಮೃತ ‘ದುರ್ಗಾ ತರಂಗಂ’ – ಖ್ಯಾತ ಸಿನಿಮಾ ತಾರೆ ನಾಟ್ಯ ಚತುರೆ ಭವ್ಯಶ್ರೀ ರೈ ಇವರಿಂದ

ಸದಸ್ಯರೆಲ್ಲರೂ ತಮ್ಮ ಬಂಧು–ಬಾಂಧವರೊಡಗೂಡಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ಸಂತೋಷ್ ಶೆಟ್ಟಿ ಜೆ**
ಗೌ॥ ಕಾರ್ಯದರ್ಶಿ

**ಚಂದ್ರಹಾಸ ರೈ ಡಿ.**
ಅಧ್ಯಕ್ಷರು

**ಮಾಲತಿ ಜೆ. ಶೆಟ್ಟಿ**
ಸಂಚಾಲಕಿ, ಮೊ: 9481776303

**ಅಮೃತ ಎಸ್. ಶೆಟ್ಟಿ**
ಚೇರ್‌ಪರ್ಸನ್, ಮೊ: 8884255922

**ಡ್ರೆಸ್ ಕೋಡ್: ಹಳದಿ ಮತ್ತು ಹಸಿರು (Yellow & Green)**

ಇವರು ನಮ್ಮವರು

## ಎಲ್ಲರ ಬಾಳಲ್ಲಿ ನಗೆ ಮೂಡಿಸುವ

# ಡಾ. ಸುಭಾಶ್ಚಂದ್ರ ಶೆಟ್ಟಿ ಬಿ.



ಕೃಷಿ ಕುಟುಂಬದಲ್ಲಿ ಹುಟ್ಟಿ, ಜನಪ್ರಿಯ ದಂತವೈದ್ಯರಾಗಿ, ಅಂತರರಾಷ್ಟ್ರೀಯ ಮಟ್ಟದ ಉದ್ಯಮಿಯಾಗಿ ಬೆಳೆದ ಡಾ.ಬಿ.ಸುಭಾಸ್‌ಚಂದ್ರ ಶೆಟ್ಟಿಯವರದ್ದು ಅನುಕರಣೀಯ ವ್ಯಕ್ತಿತ್ವ. ತುಂಬಿದ ಕೊಡ ತುಳುಕುವುದಿಲ್ಲ ಎಂಬಂತೆ, ತುಂಬು ವ್ಯಕ್ತಿತ್ವದ ಶೆಟ್ಟರು ಎಂದೂ ಪ್ರಚಾರ, ಮನ್ನಣೆ ಬಯಸಿದವರಲ್ಲ. ಮಿತಭಾಷಿ; ಆದರೆ ಹೃದಯ ವೈಶಾಲ್ಯದ ವಿಚಾರಕ್ಕೆ ಬಂದರೆ ಅವರಿಗೆ ಅವರೇ ಸಾಟಿ. ಸಮಾಜದ ಚಟುವಟಿಕೆಗಳಿಗೆ ಸದಾ ಬೆಂಬಲ ನೀಡುವ ಕೊಡುಗೈ ದಾನಿ. ಬಂಟ ಸಮುದಾಯದ ಅದೆಷ್ಟೋ ಮಕ್ಕಳ ಶಿಕ್ಷಣಕ್ಕೆ ನೆರವಾಗಿದ್ದಾರೆ. ಸಮಾಜದ ಹಲವು ಬಡ ಪ್ರತಿಭಾವಂತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ದತ್ತು ಪಡೆದಿರುವುದು 'ಶಿಕ್ಷಣದಿಂದಷ್ಟೇ ಸಮುದಾಯದ ಅಭಿವೃದ್ಧಿ ಸಾಧ್ಯ' ಎಂಬ ಸಿದ್ಧಾಂತದಿಂದ, ಶಿಕ್ಷಣಕ್ಕೆ ಯಾರೇ ನೆರವು ಕೇಳಿದರೂ ಇಲ್ಲ ಎಂದು ಹೇಳಿದ ನಿದರ್ಶನ ಸಿಗದು.

ಸರಳ ಸಜ್ಜನಿಕೆಗೆ ಮತ್ತೊಂದು ಹೆಸರು ಸುಭಾಸ್‌ಚಂದ್ರ ಶೆಟ್ಟಿಯವರದ್ದು. ಹಣ, ಹುದ್ದೆ, ಪ್ರಚಾರದ ಹಿಂದೆ ಬೀಳದೇ ಕಾನನದ ಕುಸುಮದಂತೆ, ಸದ್ದುಗದ್ದಲವಿಲ್ಲದೇ ಅಮೋಘ ಸಾಧನೆ ಮಾಡಿದ ಅವರ ವ್ಯಕ್ತಿತ್ವ ಎಲ್ಲರಿಗೂ ಆದರ್ಶ.

ಶಿಕ್ಷಣ ಪ್ರೇಮ ಅವರಿಗೆ ರಕ್ತಗತವಾಗಿಯೇ ಬಂದಿದೆ. ಬ್ರಹ್ಮಾವರದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಎಸ್‌ಎಂಎಸ್ ಹೈಸ್ಕೂಲ್‌ನಲ್ಲಿ ಪ್ರೌಢಶಿಕ್ಷಣ ಪಡೆದ ಬಳಿಕ ಬೆಂಗಳೂರಿನ ಸರ್ಕಾರಿ ದಂತ ವೈದ್ಯಮಹಾವಿದ್ಯಾಲಯದಲ್ಲಿ ಬಿಡಿಎಸ್ ಹಾಗೂ ಎಂಡಿಎಸ್ ಪದವಿ ಪಡೆದರು. ತಂದೆ ಮೊಳಹಳ್ಳಿ ನಾರಾಯಣ ಶೆಟ್ಟರು ಶಿಕ್ಷಕರಾಗಿ. ಶಿಸ್ತು, ಸಂಯಮ, ನುಡಿದಂತೆ ನಡೆಯುವ ವ್ಯಕ್ತಿತ್ವದಿಂದ ಇಡೀ ಸಮಾಜದ ಮನ್ನಣೆ ಗಳಿಸಿದ್ದವರು. ಶಿಸ್ತು, ನೇರ ನಡೆ–ನುಡಿಯುಳ್ಳ ಸುಭಾಸ್‌ಚಂದ್ರ ಶೆಟ್ಟಿಯವರಿಗೆ ತಂದೆಯೇ ಆದರ್ಶ. ತಾಯಿ ಬ್ರಹ್ಮಾವರ ಪಡುಬೆಟ್ಟು ಬೀಡು ಮೀನಾಕ್ಷಿ ಶೆಟ್ಟಿ. ತಂದೆ–ತಾಯಿಗಳಿಬ್ಬರೂ ಕೂಡಾ ಮಗನ ವಿದ್ಯಾಭ್ಯಾಸಕ್ಕೆ ಒತ್ತಾಸೆಯಾಗಿ ನಿಂತಿದ್ದರು. ಇದರ ಫಲವಾಗಿಯೇ ಇಂದು ಸಮಾಜದ ಉನ್ನತ ಸ್ಥಾನದಲ್ಲಿರಲು ಸಾಧ್ಯವಾಗಿದೆ ಎಂದು ಶೆಟ್ಟರು ಪ್ರಾಮಾಣಿಕವಾಗಿ ನೆನೆಸಿಕೊಳ್ಳುತ್ತಾರೆ.

ಪೂರ್ಣಿಮಾ ಶೆಟ್ಟಿ ಅವರನ್ನು ವಿವಾಹವಾಗಿ ಪುತ್ರಿ ಹಾಗೂ ಇಬ್ಬರು ಪುತ್ರರ ಜತೆಗೆ ತುಂಬುಸಂಸಾರ ನಡೆಸುತ್ತಿದ್ದಾರೆ. ತಂದೆಯ ಹಾದಿಯಲ್ಲೇ ಮುನ್ನಡೆದ ಡಾ. ಸಫಲ್ ಶೆಟ್ಟಿ, ಕಾನ್ಫಿಡೆಂಟ್ ಡೆಂಟಲ್ ಕೇರ್ ಎಂಬ ಸಮೂಹ ಆಸ್ಪತ್ರೆಗಳನ್ನು ನಡೆಸುತ್ತಿದ್ದಾರೆ. ಇವರ ಪತ್ನಿ ಸಪ್ನ ಶೆಟ್ಟಿ ಕೂಡಾ ದಂತವೈದ್ಯೆ. ಮತ್ತೊಬ್ಬ ಮಗ ರಕ್ಷಿತ್ ಶೆಟ್ಟಿ, ಬಿ.ಇ. ಪದವಿ ಮುಗಿಸಿ ಬಹುರಾಷ್ಟ್ರೀಯ ವೈದ್ಯಕೀಯ ಸಾಧನಗಳ ಕಂಪನಿಯ ಸಿಇಓ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ದಂತವೈದ್ಯ ಡಾ.ಆಶೀಶ್ ಶೆಟ್ಟಿಯವರನ್ನು ವಿವಾಹವಾದ ಮಗಳು ಮೋಕ್ಷಾ ಶೆಟ್ಟಿ ಹೀಗೆ ಮೂವರು ಮಕ್ಕಳೂ ತಂದೆಯ ಆದರ್ಶಗಳನ್ನೇ ಪಾಲಿಸಿಕೊಂಡು ಬೆಳೆದವರು.

ಅಧ್ಯಯನದ ಬಳಿಕ ಮಂಗಳೂರಿನಲ್ಲಿ ದಂತವೈದ್ಯರಾಗಿ ವೃತ್ತಿ ಆರಂಭಿಸಿದ ಸುಭಾಸ್‌ಚಂದ್ರ ಶೆಟ್ಟರು, ಜತೆಜತೆಗೇ 1978ರಲ್ಲೇ ಬೆಂಗಳೂರಿನಲ್ಲಿ ದಂತವೈದ್ಯಕೀಯ ಸಾಧನಗಳ ಉದ್ಯಮಕ್ಕೂ ದುಮುಕಿದರು.

ವೃತ್ತಿ ಹಾಗೂ ಉದ್ಯಮದ ನಡುವೆಯೂ ಒಂದಷ್ಟು ಸಮಯವನ್ನು ಸಂಘ ಸಂಸ್ಥೆಗಳಿಗೆ ಇಡುವ ಜಾಯಮಾನ

ಶೆಟ್ಟರದು. ಭಾರತೀಯ ದಂತವೈದ್ಯರ ಸಂಘದ ರಾಜ್ಯ ಘಟಕದ ಕಾರ್ಯದರ್ಶಿಯಾಗಿ, ಕೊಯಮತ್ತೂರಿನಲ್ಲಿ ನಡೆದ ಯಡಿಎ ರಾಷ್ಟ್ರೀಯ ಸಮ್ಮೇಳನದ ಕಾರ್ಯದರ್ಶಿಯಾಗಿ, ಐಡಿಎ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರಾಗಿ, ಐಡಿಎ ಕೇಂದ್ರ ಕಚೇರಿ ಅಧ್ಯಕ್ಷರಾಗಿ, ಬೆಂಗಳೂರು ದಂತವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ, ವೈದ್ಯಕೀಯ ಕಾಲೇಜು ಹಾಸ್ಟೆಲ್ ಸಂಘದ ಅಧ್ಯಕ್ಷರಾಗಿ, ಹೌಸ್‌ಸರ್ಜನ್ ಸಂಘದ ಅಧ್ಯಕ್ಷರಾಗಿ, ಅಸೋಸಿಯೇಶನ್ ಆಫ್ ಡೆಂಟಲ್ ಇಂಡಸ್ಟ್ರಿ ಅಂಡ್ ಟ್ರೇಡ್ ಆಫ್ ಇಂಡಿಯಾ ಅಧ್ಯಕ್ಷರಾಗಿ ಹೀಗೆ ಹತ್ತು ಹಲವು ಕಡೆಗಳಲ್ಲಿ ಸಂಘಟನಾತ್ಮಕ ಹಾಗೂ ಆಡಳಿತಾತ್ಮಕ ಕಾರ್ಯ ನಿರ್ವಹಿಸಿದ್ದಾರೆ. ಎಲ್ಲೆಡೆಯೂ ಪಾರದರ್ಶಕ, ಪಾದರಸ ವ್ಯಕ್ತಿತ್ವದ ಶೆಟ್ಟರನ್ನು ಮೆಚ್ಚದವರಿಲ್ಲ. ಇದರ ಜತೆಗೆ ಹಲವು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಕೂಡಾ ಭಾಗವಹಿಸಿದ್ದಾರೆ.

ಐಡಿಎ ಅಧ್ಯಕ್ಷರಾಗಿ ಏಕ ಸಂವಿಧಾನ ವ್ಯವಸ್ಥೆಯನ್ನು ಜಾರಿಗೆ ತಂದು, ಇಡೀ ಸಂಘದಲ್ಲಿ ಶಿಸ್ತು ಮೂಡಿಸಿದ ಹೆಗ್ಗಳಿಕೆ ಇವರದ್ದು. ವಿಶ್ವ ಆರೋಗ್ಯ ಸಂಸ್ಥೆಯ ಜತೆಗೆ ದೇಶವ್ಯಾಪಿ, 'ಸ್ಮೈಲ್ ಫಾರ್ ಆಲ್' ಆಂದೋಲನದ ಮೂಲಕ ದಂತಾರೋಗ್ಯದ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಐಡಿಎ ಕೋಲ್ಗೇಟ್ ಸಹಯೋಗದಲ್ಲಿ, ಉಚಿತ ದಂತ ತಪಾಸಣೆಯ ಪರಿಕಲ್ಪನೆಯಲ್ಲಿ ಯಶಸ್ವಿಯಾಗಿ ಜಾರಿಗೊಳಿಸುವಲ್ಲಿ ಶೆಟ್ಟರ ಪಾತ್ರ ಮಹತ್ವದ್ದು.

ಕಾನ್ಫಿಡೆಂಟ್ ಡೆಂಟಲ್ ಎಕ್ವಿಪ್‌ಮೆಂಟ್ ಎಂಬ ಉತ್ಪಾದನಾ ಸಂಸ್ಥೆಯನ್ನು ಹುಟ್ಟುಹಾಕಿ ಯಶಸ್ವಿಯಾಗಿ ಮುನ್ನಡೆಸುತ್ತಿರುವ ಸುಭಾಸ್, ಅದರ ವಹಿವಾಟನ್ನು ಇಂದು ದೇಶದ ಎಲ್ಲೆ ಮೀರಿ ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆಸಿದ್ದಾರೆ.


ರೋಟರಿ ಇಂಟರ್‌ನ್ಯಾಷನಲ್‌ನಿಂದ ಪಾಲ್ ಹ್ಯಾರೀಸ್ ಪ್ರಶಸ್ತಿ, ಆಂಧ್ರಪ್ರದೇಶ ಐಡಿಎ ಘಟಕದಿಂದ ಉತ್ತಮ ಸಾಧನೆಗಾಗಿ ಪ್ರಶಸ್ತಿ. ಸಮುದಾಯದ ಶ್ರೇಷ್ಠ ವ್ಯಕ್ತಿಯಾಗಿ ಬಂಟ ಸಮುದಾಯದ ಪುರಸ್ಕಾರ ಹೀಗೆ ಹತ್ತು ಹಲವು ಪ್ರಶಸ್ತಿಗಳು ಸಂದಿವೆ. ಪ್ರಶಸ್ತಿಗಳನ್ನು ಹುಡುಕಿಕೊಂಡು ಹೋಗುವವರೇ ಅಧಿಕವಾಗಿರುವ ಇಂದಿನ ಕಾಲದಲ್ಲಿ ಇವರ ಸಾಧನೆಯನ್ನು ಹುಡುಕಿಕೊಂಡು ಸಾಲು ಸಾಲು ಪ್ರಶಸ್ತಿಗಳು ಬಂದಿವೆ.


ಇಂಥ ಅನುಕರಣೀಯ ವ್ಯಕ್ತಿತ್ವದ ಸುಭಾಸ್‌ಚಂದ್ರ ಶೆಟ್ಟಿಯವರ ವ್ಯಕ್ತಿತ್ವ ಸಮಾಜದ ಯುವ ಪೀಳಿಗೆಗೆ ಪ್ರೇರಣೆ–ಸ್ಫೂರ್ತಿ.

● **ರವಿರಾಜ್ ಎಸ್. ಶೆಟ್ಟಿ**

**ಸಾದರ - ಸ್ವೀಕಾರ**

## ಡಾ. ಡಿ. ಕೆ ಚೌಟರ ಸಮಗ್ರ ಕೃತಿಗಳ ಕನ್ನಡ ಅನುವಾದ






# ದರ್ಬೆ

**ಸಂಪಾದಕ: ನಂಜುಂಡಸ್ವಾಮಿ ತೊಟ್ಟವಾಡಿ**

ಪ್ರಕಾಶಕರು
**ರಂಗಚೇತನ ಸಂಸ್ಕೃತಿ ಕೇಂದ್ರ**
ನಂ. 306, ಸ್ವಿಸ್ ಕಾಂಪ್ಲೆಕ್ಸ್,
ರೇಸ್‌ಕೋರ್ಸ್ ರಸ್ತೆ
ಬೆಂಗಳೂರು–560001


**ನವ ಭಾರತ ನಿರ್ಮಾಣದ ಸಂಕಲ್ಪದಿಂದ–ಸಿದ್ಧಿಯೆಡಗಿನ ಹಾದಿಯಲ್ಲಿ ಯುವ ಕಣ್ಮಣಿ, ಅಪ್ರತಿಮ ಕ್ರಾಂತಿಕಾರಿ**

# 'ಶಹೀದ್ ಭಗತ್ ಸಿಂಗ್' ಒಂದು ನೆನಪು



**ಪ್ರೇಮ್ ಪ್ರಸಾದ್ ಶೆಟ್ಟಿ**

ಈತ ಬದುಕಿದ್ದು ಕೇವಲ 23 ವರುಷ! 1907 ಸೆಪ್ಟಂಬರ್ 28ರಂದು ಅಂದಿನ ಭಾರತ ಇಂದಿನ ಪಾಕಿಸ್ತಾನ'ದ ಲಾಯಕಾಪುರ ಜಿಲ್ಲೆಯ ಭಂಗ ಎಂಬ ಗ್ರಾಮದಲ್ಲಿ ಈತನ ಜನನ. ಕ್ರಾಂತಿಕಾರಿಗಳಿಂದ ತುಂಬಿದ್ದ ಆ ಕುಟುಂಬದಲ್ಲಿ ಹುಟ್ಟಿದ ಈತನಿಗೆ ಸಹಜವಾಗಿಯೇ ಕ್ರಾಂತಿಕಾರಿ ಯೋಚನೆಗಳಲ್ಲದೇ ಇನ್ನೇನು ಸಾಧ್ಯ? ಮೀಸೆ ಚಿಗುರೊಡೆಯುವ ಹೊತ್ತಲ್ಲೇ ಈತನಿಗೆ ಬ್ರಿಟಿಷ್ ಸರ್ಕಾರ ದೇಶಿಯರ ಮೇಲೆ ನಡೆಸುತ್ತಿರುವ ದಬ್ಬಾಳಿಕೆ, ಬಡತನದಿಂದ ತತ್ತರಿಸಿ ಹೋಗಿರುವ ಜನತೆ, ಮಾನವ ಹಕ್ಕಿನ ಲವಲೇಶವೂ ಇಲ್ಲದ ಆಡಳಿತ ಇವೆಲ್ಲವೂ ನೋಡಿ ರೋಷ ಉಕ್ಕಿ ಬಂದಿತ್ತು. ತನ್ನ ಒಂದಿಷ್ಟು ಸ್ನೇಹಿತರೊಂದಿಗೆ ಸೇರಿ ಈತ 'ಹಿಂದುಸ್ತಾನ್ ಸೋಶಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಶನ್' (HSRA) ಹೆಸರಿನ ಕ್ರಾಂತಿಕಾರಿ ಸಂಘಟನೆಯನ್ನು ಹುಟ್ಟು ಹಾಕಿ ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಟಕ್ಕಿಳಿದ. 1919ರ 'ಜಲಿಯನ್ ವಾಲ ಭಾಗ್ ಹತ್ಯಾಕಾಂಡ' ಹಾಗೂ ತದನಂತರ ನಡೆದ ಚೌರಾಚೌರಿಯ ಘಟನೆಗಳು ಈತನ ಮನಸ್ಸಿಗೆ ಗಾಢ ಪರಿಣಾಮ ಬೀರಿತ್ತು. ತಕ್ಷಣವೇ ಈತ ಗಾಂಧೀಜಿಯ ಅಸಹಕಾರ ಚಳುವಳಿಯಿಂದ ಹೊರಬಂದು ಕ್ರಾಂತಿಕಾರಿ ಮಾರ್ಗದಿಂದಲೇ ಸ್ವಾತಂತ್ರ ಪಡೆಯುವ ನಿರ್ಧಾರಕ್ಕೆ ಬಂದ.




ಲಾಹೋರಿನ ನ್ಯಾಷನಲ್ ಕಾಲೇಜ್‌ನಲ್ಲಿ ವ್ಯಾಸಂಗ ಮಾಡುವ ಸಂದರ್ಭ ಈತ ಇನ್ನಿತರ ಕ್ರಾಂತಿಕಾರಿಗಳ ಸಂಪರ್ಕ ಸಾಧಿಸಿದ. ಭಗವತಿ ಚರಣ್, ರಾಜ್ ಗುರು, ಸುಖದೇವ್, ಚಂದ್ರಶೇಖರ್ ಅಜಾದ್‌ರಂತವರು ಈತನ ಸಹಪಾಠಿಗಳಾದರು. ಎಲ್ಲರೂ ಸೇರಿ 'ಹಿಂದುಸ್ತಾನ್ ಸಮಾಜವಾದಿ ಪ್ರಜಾತಂತ್ರ ಸಂಘ' ಎಂಬ ಸಂಘಟನೆ ಹುಟ್ಟುಹಾಕಿ, ಬ್ರಿಟಿಷರು ನಿಯೋಜಿಸಿದ್ದ 'ಸೈಮನ್ ಆಯೋಗ'ದ ವಿರುದ್ಧ ತಮ್ಮ ಹೋರಾಟ ನಡೆಸಿದರು. ಸೈಮನ್ ಆಯೋಗ ಲಾಹೋರ್‌ಗೆ ಭೇಟಿ ಕೊಡುವ ಸಂದರ್ಭ ಬಹು ದೊಡ್ಡ ಪ್ರತಿಭಟನೆ ನಡೆದು ಅದರಲ್ಲಿ 'ಪಂಜಾಬ್ ಕೇಸರಿಯೆಂದೇ ಪ್ರಸಿದ್ದರಾಗಿದ್ದ ಸ್ವಾತಂತ್ರ್ಯ ಹೋರಾಟಗಾರ ಲಾಲಾ ಲಜಪಾತರಾಯ್‌ರವರಿಗೆ ತೀವ್ರ ಲಾಠಿ ಪ್ರಹಾರ ನಡೆದು ಕೆಲ ದಿನಗಳ ಬಳಿಕ ಅವರು ಮೃತ ಪಟ್ಟರು. ಇವರ ನಿಧನದ ಪ್ರತೀಕಾರ ತೆಗೆದುಕೊಳ್ಳಲು ಈತ ತನ್ನ ಸ್ನೇಹಿತನಾದ ರಾಜ್ ಗುರುವಿನೊಂದಿಗೆ ಸೇರಿ ಬ್ರಿಟಿಷ್ ಅಧಿಕಾರಿಯಾಗಿದ್ದ ಜೇಮ್ಸ್ ಸ್ಕಾಟ್‌ನನ್ನು ಗುಂಡಿಕ್ಕಿ ಕೊಂದ. ನಂತರ 1929ರಲ್ಲಿ ಈತ ತನ್ನ ಇನ್ನೊಬ್ಬ ಮಿತ್ರನಾದ ಭಟುಕೇಶ್ವರ ದತ್ತನೊಂದಿಗೆ ಸೇರಿಕೊಂಡು 'ಸೆಂಟ್ರಲ್ ಲೆಜಿಸ್ಲೇಟಿವ್ ಅಸೆಂಬ್ಲಿ'ಗೆ ನುಗ್ಗಿ ಬಾಂಬ್ ಎಸೆದು, ಕರಪತ್ರ ಬಿಸಾಕಿ, 'ಇನ್ಕ್ವಿಲಾಬ್ ಜಿಂದಾಬಾದ್' ಘೋಷಣೆ ಹಾಕಿ, ಬಂಧನಕ್ಕೊಳಗಾದ. ಜೈಲಿನಲ್ಲಿದ್ದ ಈತ ಅಲ್ಲಿಯೂ ಖೈದಿಗಳ ದುಸ್ಥಿತಿ, ಯುರೋಪ್ ಮತ್ತು ಭಾರತೀಯ ಖೈದಿಗಳ ನಡುವಿನ ತಾರತಮ್ಯದ ವಿರುದ್ಧ ತನ್ನ ಪ್ರತಿಭಟನೆ ಪ್ರಾರಂಭಿಸಿ ಸುಮಾರು 116 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಕೊನೆಗೂ ಯಶಸ್ವಿಯಾದ. ಈತನ ಈ ಹೋರಾಟ ಇಡೀ ದೇಶದ ಕಣ್ತೆರೆಸುವಂತೆ ಮಾಡಿದ್ದಲ್ಲದೇ ಯುವಕರಲ್ಲಿ ಕ್ರಾಂತಿಕಾರಿ ಹೋರಾಟದ ಕೆಚ್ಚನ್ನು ತುಂಬಿ, ತಾವೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವಂತೆ ಮಾಡಿತ್ತು.

1931ರಲ್ಲಿ ಈತ ಹಾಗೂ ಈತನ ಮಿತ್ರನಾದ ರಾಜ್ ಗುರುವಿಗೆ ಲಾಹೋರ್ ಷಡ್ಯಂತ್ರ ಪ್ರಕರಣದಲ್ಲಿ ಮರಣ ದಂಡನೆ ಶಿಕ್ಷೆಯಾಯ್ತು. ಯಾವುದೇ ರೀತಿಯ ವಾದಕ್ಕೂ ಅವಕಾಶ ಕೊಡದೆ ಬ್ರಿಟಿಷ್ ಸರ್ಕಾರ ಇವರನ್ನು ನೇಣುಗಂಬಕ್ಕೇರಿಸುವ ನಿರ್ಧಾರ ಮಾಡಿತ್ತು. ತನ್ನ ಸಾವು ಖಚಿತವೆಂದು ಗೊತ್ತಿದ್ದರೂ ಈತ "ಓ ನನ್ನ ದೇಶನಿವಾಸಿಗಳೇ, ನಿಮಗಿದೋ ವಿದಾಯ.

ಆದರೆ ನಮ್ಮ ಈ ಪಯಣ ಮುಂದುವರೆಯುತ್ತದೆ" ಎಂದು ಸಿಂಹದಂತೆ ಗರ್ಜಿಸಿದ. ಈತ ತನ್ನ ಜೀವದ ಹಂಗಿಲ್ಲದೇ ದೇಶದ ಲಕ್ಷಾಂತರ ಯುವಕರನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡುವಂತೆ ಪ್ರೇರೇಪಿಸಿದ. ಇಂತಹ ಅಪ್ರತಿಮ ಹೋರಾಟಗಾರ, ಮಹಾನ್ ಕ್ರಾಂತಿಕಾರಿ, ಯುವ ಜನತೆಯ ಪ್ರೇರಕ ಶಕ್ತಿ, ವೀರ ಹುತಾತ್ಮನೇ ನಮ್ಮ ಆದರ್ಶಪ್ರಾಯ "ಭಗತ್ ಸಿಂಗ್".

## ಯುವ ಭಾರತೀಯರ ಸಂಕಲ್ಪ–ನವ ಭಾರತ ನಿರ್ಮಾಣದ ಸಿದ್ಧಿ.

ಇಂತಹ ಅದೆಷ್ಟೋ ವೀರ ಹುತಾತ್ಮರ ಶ್ರಮ, ಬಲಿದಾನ, ಹೋರಾಟಗಳು ನಮಗಿಂದು ಸ್ವಾತಂತ್ರ್ಯದ ಫಲ ನೀಡಿವೆ. ಇಂದು ದೇಶಕ್ಕಾಗಿ ಬಲಿದಾನ ಮಾಡುವ ಸೌಭಾಗ್ಯ ನಮ್ಮದಲ್ಲದಿದ್ದರೂ, ದೇಶಕ್ಕಾಗಿ ಜೀವಿಸುವ ಸೌಭಾಗ್ಯ ಖಂಡಿತವಾಗಿಯೂ ನಮಗೆ ದೊರಕಿದೆ. ಆದ್ದರಿಂದ 1942ರ ಕ್ವಿಟ್ ಇಂಡಿಯಾ ಆಗಸ್ಟ್ ಕ್ರಾಂತಿಯಿಂದ 1947ರ 'ಸ್ವತಂತ್ರ ದೇಶ'ದ ಘೋಷಣೆಯ ಆ ಮಹತ್ತರ ಐದು ವರ್ಷವನ್ನು ನೆನಪಿಸಿಕೊಂಡು, ಇಂದು ನಾವೆಲ್ಲರೂ ಅದರಲ್ಲೂ ವಿಶೇಷವಾಗಿ ಯುವ ಪೀಳಿಗೆಯು 2017ರಿಂದ 2022ರ ಈ ಐದು ವರ್ಷದಲ್ಲಿ ದೇಶವನ್ನು ಬಡತನದಿಂದ ಮುಕ್ತ, ಭಯೋತ್ಪಾದನೆಯಿಂದ ಮುಕ್ತ, ಜಾತಿವಾದದಿಂದ ಮುಕ್ತ, ಭ್ರಷ್ಟಾಚಾರದಿಂದ ಮುಕ್ತ, ಅಸ್ವಚ್ಛತೆಯಿಂದ ಮುಕ್ತಗೊಳಿಸುವ ಹಾಗೂ 'ನವ ಭಾರತ'ದ ನಿರ್ಮಾಣಕ್ಕಾಗಿ ಸಂಕಲ್ಪತೊಡಬೇಕಾಗಿದೆ. 2022ರಲ್ಲಿ ದೇಶ 75ನೇ ಸ್ವಾತಂತ್ರ್ಯೋತ್ಸವ ಆಚರಿಸುವ ಸಂದರ್ಭದಲ್ಲಿ ನಮ್ಮ ಈ ರಾಷ್ಟ್ರ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಒಂದು ಸಮೃದ್ಧ, ಸಶಕ್ತ ಭಾರತವಾಗಿ ವಿಶ್ವದಲ್ಲೇ ರಾರಾಜಿಸಲಿ ಎಂದು ನಾವೆಲ್ಲರೂ ಪಣತೊಡಬೇಕಿದೆ.

ಭಗತ್ ಸಿಂಗ್‌ನ ಆ ಘೋಷ ವಾಕ್ಯ "ಓ ಅಮ್ಮಾ, ನಿನ್ನ ವೈಭವ ಅಮರವಾಗಿರಲಿ, ನಾವು ನಾಲ್ಕೇ ನಾಲ್ಕು ದಿನ ಬದುಕಿದ್ದರೂ ಸಹಾ" (ತೇರಾ ವೈಭವ್ ಅಮರ್ ರಹೇ ಮಾ, ಹಮ್ ದಿನ್ ಚಾರ್ ರಹೇ ಯಾ ನಾ ರಹೇ) ನಮ್ಮ ಮನದಲ್ಲಿ ಸದಾ ಗುಣುಗುತ್ತಿರಲಿ.

ಜೈ ಹಿಂದ್.

## ಅಭಿನಂದನೆಗಳು




ಬಸ್ರೂರು ರಾಜೀವ ಶೆಟ್ಟಿ

ಕರ್ನಾಟಕ ರಾಜ್ಯ ಘಟಕದ ಸಭಾಪತಿಗಳಾದ ಶ್ರೀ ಬಸ್ರೂರು ರಾಜೀವ ಶೆಟ್ಟಿಯವರು ಭಾರತೀತ ರೆಡ್ ಕ್ರಾದ್ ಸಂಸ್ಥೆ, ಕೇಂದ್ರ ಕಛೇರಿ, ನವದೆಹಲಿಯಲ್ಲು ದಿನಾಂಕ ೨೮.೦೭.೨೦೧೭ರಂದು ನಡೆದ ಆಡಳಿತ ಮಂಡಳಿ ಸಭೆಯ ಚುನಾವಣೆಯಲ್ಲಿ ಅತ್ಯಧಿಕ ಮತಗಳನ್ನು ಗಳಿಸಿ ಮುಂದಿನ ಎರಡು ವರ್ಷಗಳ ಅವಧಿಗೆ ಕೇಂದ್ರ ಕಛೇರಿಯ ಆಡಳಿತ ಮಂಡಳಿ ಸದಸ್ಯರಾಗಿ ಅಧಿಕೃತವಾಗಿ ಚುನಾಯಿಸಲ್ಪಟ್ಟಿದ್ದಾರೆ. ಸುಮಾರು ೬೦ ವರ್ಷಗಳ ನಂತರ ಕರ್ನಾಟಕ ರಾಜ್ಯ ಘಟಕವು ತನ್ನ ಪ್ರತಿನಿಧಿಯನ್ನು ನವದೆಹಲಿಯ ಆಡಳಿತ ಮಂಡಳಿಗೆ ಆಯ್ಕೆಗೊಳಿಸುವಲ್ಲಿ ಯಶಸ್ವಿಯಾಗಿದೆ.

ಮಾನ್ಯ ಶ್ರೀ ಬಸ್ರೂರು ರಾಜೀವ್ ಶೆಟ್ಟಿಯವರು ಕಳೆದ ೨೦೧೩–೧೬ನೇ ಸಾಲಿನಲ್ಲಿ ರಾಜ್ಯ ಘಟಕದ ಸಭಾಪತಿಗಳಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಅಲ್ಲದೆ ೨೦೦೯ ರಿಂದ ೨೦೧೬ ರವರೆಗೆ ಉಡುಪಿ ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿಗಳಾಗಿಯೂ ಸಹ ಕಾರ್ಯನಿರ್ವಹಿಸಿರುತ್ತಾರೆ. ಪ್ರಸ್ತುತ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಘಟಕದ ಸಭಾಪತಿಗಳಾಗಿ ೨೦೧೬–೧೯ನೇ ಸಾಲಿಗೆ ಚುನಾಯಿಸಲ್ಪಟ್ಟಿರುತ್ತಾರೆ. ಅವರ ನೇತೃತ್ವದಲ್ಲಿ ಹಲವಾರು ಮನವೀಯತೆಯ ಸಮಾಜಮುಖಿ ಕಾರ್ಯಕ್ರಮಗಳನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ರಾಜ್ಯ ಘಟಕವು ಹಮ್ಮಿಕೊಂಡಿದ್ದು ಉತ್ತಮ ಸೇವೆಯನ್ನು ಸಲ್ಲಿಸುತ್ತಿದೆ.

# ಡೆಂಗ್ಯೂ ಜ್ವರದಂತಹ

## ಮಹಾಮಾರಿಯ ಬಗ್ಗೆ ಮುನ್ನೆಚ್ಚರಿಕೆ ಹಾಗೂ ರಾಜ್ಯದಲ್ಲಿ ಹೆಚ್ಚುತ್ತಿರುವುದು ಆಘಾತಕಾರಿ ಅಂಶ



**ಎ.ಬಿ. ಶೆಟ್ಟಿ**
ಮಾಜಿ ಅಧ್ಯಕ್ಷರು
ವಿಜಯಾ ಬ್ಯಾಂಕ್ ವರ್ಕರ್ಸ್ ಆರ್ಗನೈಸೇಷನ್
ವಿಜಯಾ ಬ್ಯಾಂಕ್ ಆಫೀಸರ್ಸ್ ಯೂನಿಯನ್

ಇತ್ತೀಚಿನ ಅಂಕಿ–ಅಂಶದಂತೆ ಇಡೀ ದೇಶದಲ್ಲಿಯೆ ಕರ್ನಾಟಕ ರಾಜ್ಯವು ಡೆಂಗ್ಯೂ ಕಾಯಿಲೆ ಭಾದಿತರಾದವರ ಸಂಖ್ಯೆಯಲ್ಲಿ 3ನೇ ಸ್ಥಾನದಲ್ಲಿದೆ ಎಂಬುದು ಬೇಸರದ ಸಂಗತಿ. ಕೇರಳ ಮತ್ತು ತಮಿಳುನಾಡು ಹೊರತುಪಡಿಸಿದರೆ ನಮ್ಮ ರಾಜ್ಯದಲ್ಲಿ ಅತೀ ಹೆಚ್ಚಿನ ಜನ ಡೆಂಗ್ಯೂ ಜ್ವರದಿಂದ ಬಳಲುತ್ತಿದ್ದಾರೆಂದು ತಿಳಿಯಲು ಆಘಾತಕಾರಿಯಾಗಿದೆ ಎಂದು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳೆ ಬಹಿರಂಗ ಪಡಿಸಿದ್ದಾರೆ. ಅದರಲ್ಲೂ ರಾಜ್ಯದ ಸುಮಾರು 37% ಭಾದಿತರಾಗಿದ್ದವರು ಕೇವಲ ಬೆಂಗಳೂರು ನಗರದಲ್ಲಿಯೇ ಇದ್ದಾರೆ ಎನ್ನುವುದು ಇನ್ನೊಂದು ವಿಶೇಷತೆ. ರಾಜ್ಯದಲ್ಲಿ ಸುಮಾರು 11610 ಜನರು ಡೆಂಗ್ಯೂ ಜ್ವರಕ್ಕೆ ಆಗಸ್ಟ್ 16, 2017ರ ಒಳಗೆ ತುತ್ತಾಗಿದ್ದಾರೆಂಬ ವರದಿ ಇದೆ. ಅದರಲ್ಲಿ ದಿನೇ ದಿನೇ ಡೆಂಘೆ ಜ್ವರಕ್ಕೆ ಒಳಪಟ್ಟವರ ಸಂಖ್ಯೆ ನಗರದಲ್ಲಿ ಹೆಚ್ಚಾಗುತ್ತಿದೆ ಹಾಗೂ ಆಸ್ಪತ್ರೆಗಳಲ್ಲಿ ದಾಖಲಾಗಿರುವವರಲ್ಲಿ ಹೆಚ್ಚಿನವರು ಡೆಂಗ್ಯೂ ಜ್ವರಕ್ಕೆ ತುತ್ತಾದವರೆಂದು ಕೂಡ ಮಾಧ್ಯಮಗಳಲ್ಲಿ ವರದಿ ಬರುತ್ತಿದೆ ಹಾಗೂ ಕೆಲವು ಆಸ್ಪತ್ರೆಗಳಲ್ಲಿ ಹಾಸಿಗೆಗಳು ಇಲ್ಲದೆ ಹೊರರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಲವು ದಿನಗಳಿಂದ ಮಳೆ ಹೆಚ್ಚಾಗಿರುವುದರಿಂದ ಈ ಮಹಾಮಾರಿ ರೋಗ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಮತ್ತು ರಾಜ್ಯದಲ್ಲಿ ಸುಮಾರು 5ಕ್ಕಿಂತಲೂ ಹೆಚ್ಚುಮಂದಿ ಇದರಿಂದ ಮೃತಪಟ್ಟಿರುವ ಬಗ್ಗೆ ವರದಿಯಾಗಿದೆ. ತಮಿಳು ನಾಡಿನಲ್ಲಿ ಸುಮಾರು 15 ಮಂದಿ ಮತ್ತು ಕೇರಳದಲ್ಲಿ 20 ಮಂದಿ ಮೃತಪಟ್ಟಿರುತ್ತಾರೆ.

ಈ ಬಗ್ಗೆ ಕೇಂದ್ರದ ತಂಡ ಕೂಡ ನಮ್ಮ ರಾಜ್ಯಕ್ಕೆ ಭೇಟಿ ನೀಡಿ ಸಂಬಂಧಪಟ್ಟ ನಗರಪಾಲಿಕೆ ಅಧಿಕಾರಿಗಳಿಗೆ ಹಾಗೂ ವೈದ್ಯರಿಗೆ ಡೆಂಗ್ಯೂ ಜ್ವರದ ನಿಯಂತ್ರಣ ಸಾಧಿಸಲು ಸಲಹೆ ನೀಡಿರುತ್ತಾರೆ. ಸರಿಯಾದ ಲೆಕ್ಕವಿಲ್ಲದೆ ಇನ್ನೆಷ್ಟೋ ಜನ ಸಾವಿಗೀಡಾಗಿರುತ್ತಾರೆ. ಹಳ್ಳಿಗಳಲ್ಲಿ ಈ ಬಗ್ಗೆ ಸರಿಯಾದ ಮಾಹಿತಿ ಸಿಗುತ್ತಿಲ್ಲ.

ಈ ಮಹಾಮಾರಿ ಡೆಂಗ್ಯೂ ಕಾಯಿಲೆ ಸೊಳ್ಳೆಗಳಿಂದ ಹಬ್ಬುತ್ತದೆ. ಇದನ್ನು ತಡೆಗಟ್ಟುವ ಕೆಲಸದಲ್ಲಿ ಮಹಾನಗರ ಪಾಲಿಕೆಗಳು ಹಾಗೂ ಜಿಲ್ಲಾ ನಗರ ಪಾಲಿಕೆಗಳು ಬಹಳ ಮುತುವರ್ಜಿ ತೆಗೆದುಕೊಳ್ಳುವ ಅಗತ್ಯವಿದೆ. ಆದರೆ ಈ ಬಗ್ಗೆ ಬೇಕಾದಷ್ಟು ಕೆಲಸ ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ನಡೆಯುತ್ತಿಲ್ಲ. ಈ ನಿಟ್ಟಿನಲ್ಲಿ ಕೇವಲ ಸರಕಾರ ಮಾತ್ರ ಕ್ರಮ ಕೈಗೊಂಡಲ್ಲಿ ಸಂಪೂರ್ಣ ತಡೆಗಟ್ಟಲು ಸಾಧ್ಯವಾಗುವುದಿಲ್ಲ ನಮ್ಮ ಜನರಲ್ಲಿ ಈ ಬಗ್ಗೆ ಬೇಕಾದಷ್ಟು ಜಾಗೃತಿ ಮೂಡುವುದು ಬಹಳ ಅಗತ್ಯವಾಗಿದೆ. ಯಾವುದೇ ಜಾಗದಲ್ಲಿ ನೀರು ತಟಸ್ಥವಾಗಿದಲ್ಲಿ ಸೊಳ್ಳೆಗಳು ಮೊಟ್ಟೆ ಇಡುವ ಸಾಧ್ಯತೆ ಜಾಸ್ತಿಯಾಗಿರುತ್ತದೆ. ಸೊಳ್ಳೆ ನಿರ್ಮೂಲನಾ ಕಾರ್ಯಕ್ರಮವನ್ನು ಸೂಕ್ತವಾಗಿ ಕೈಗೊಳ್ಳ ಬೇಕಾಗಿದೆ. ಸೊಳ್ಳೆಗಳು ಉತ್ಪತ್ತಿಯಾಗದಂತೆ ಅದಕ್ಕೆ ತಕ್ಕ ಮದ್ದನ್ನು ಸಿಂಪಡಿಸಬೇಕು. ಅದನ್ನು ತಡೆಹಿಡಿಯಲು ಅಥವಾ ನಿಯಂತ್ರಿಸಲು ತೆಗೆದುಕೊಳ್ಳಬೇಕಾದ ಕ್ರಮಗಳು ಸರಿಯಾಗಿ ನಡೆಯುತ್ತಿಲ್ಲ. ಯಾವುದೇ ವ್ಯಕ್ತಿಗೆ ಜ್ವರ ಬಂದ ಕೂಡಲೆ 2–3 ದಿನದೊಳಗೆ ರಕ್ತ ಪರೀಕ್ಷೆ ಮಾಡಬೇಕು. ಅದೂ ಅಲ್ಲದೆ 2 ದಿನಗಳಲ್ಲಿ ಮೈಕೈ ನೋವು ಜ್ವರ ನಿಯಂತ್ರಣಕ್ಕೆ ಬರದಿದ್ದಲ್ಲಿ ಆಸ್ಪತ್ರೆಗೆ ದಾಖಲಿಸುವುದು ಉತ್ತಮ. ನಂತರ ಮೂರನೆ ದಿನದಲ್ಲಿ ಜ್ವರ ನಿಯಂತ್ರಣ ಬರದಿದ್ದಲ್ಲಿ ಹತ್ತಿರದ ಯಾವುದೇ ಆಸ್ಪತ್ರೆಯಲ್ಲಿರುವ (ಪಿಸಿಯು) ವಾರ್ಡಿಗೆ ದಾಖಲಿಸಬೇಕು. ತೀರ್ವ ನಿಗಾ ಘಟಕದಲ್ಲಿ ಕೂಡಲೆ ಅದಕ್ಕೆ ಬೇಕಾಗುವ ಚಿಕಿತ್ಸೆ ಒದಗುತ್ತದೆ.

ಡೆಂಗ್ಯೂ ಜ್ವರಕ್ಕೆ ತುತ್ತಾದ ರೋಗಿಯ ದೇಹದಲ್ಲಿರುವ ರಕ್ತದಲ್ಲಿ ಪ್ಲೇಟ್‌ಲೆಟ್ ಬಹಳ ಶೀಘ್ರದಲ್ಲಿ ಕಡಿಮೆಯಾಗುತ್ತಾ ಬರುತ್ತದೆ. ಯಾವುದೇ ಆರೋಗ್ಯವಂತ ದೇಹದಲ್ಲಿರುವ ರಕ್ತದಲ್ಲಿ ಸುಮಾರು 1 ½ ಲಕ್ಷಕ್ಕಿಂತಲೂ ಹೆಚ್ಚಿನ ಪ್ಲೇಟ್‌ಲೆಟ್‌ನ ಕಣಗಳ ಅವಶ್ಯಕತೆ ಇದೆ. ಆದರೆ ಈ ಜ್ವರಕ್ಕೆ ತುತ್ತಾದಲ್ಲಿ ರೋಗಿಯ ದೇಹದಲ್ಲಿರುವ ರಕ್ತದಲ್ಲಿ ಪ್ರತಿ ಗಂಟೆಗೂ ಪ್ಲೇಟ್‌ಲೆಟ್ ಕಣಗಳು

ಗಣನೀಯವಾಗಿ ಕುಸಿಯುತ್ತಾ ಬರುತ್ತದೆ. ಸುಮಾರು 20000ಕ್ಕೂ ಕಡಿಮೆಯಾದಲ್ಲಿ ಕೆಲವೊಮ್ಮೆ ದೇಹದೊಳಗೆ ಕೆಲವು ಅಂಗಾಂಗಗಳಲ್ಲಿ ರಕ್ತಸ್ರಾವ ಆಗುವ ಸಂಭವವಿದೆ. ಅದರಲ್ಲೂ ಋತುಮತಿಯಾಗದ ಹೆಂಗಸರಿಗೆ ಮತ್ತೂ ಅಪಾಯಕಾರಿ. ಇಂತಹ ರೋಗಿಗಳಿಗೆ ತುರ್ತು ಚಿಕಿತ್ಸೆ ಒದಗದಿದ್ದರೆ ಅಂತಹ ರೋಗಿಗಳು ಅಂಗಾಂಗಳ ವೈಫಲ್ಯತೆಯನ್ನು ಕಾಣಬಹುದು. (Multiple organ failure) ಈ ಅಪಾಯಕಾರಿ ಸಂದರ್ಭದಲ್ಲಿ ರೋಗಿಯ ಪ್ಲೇಟ್‌ಲೆಟ್‌ಗಳು ತೀರ ಕಡಿಮೆಯಾದಲ್ಲಿ ವೈದ್ಯರು ಕೂಡಲೆ ಅವರಿಗೆ ರಕ್ತ ಪೂರೈಕೆಯ ಅವಶ್ಯಕತೆ ಇದೆ ಎನ್ನುತ್ತಾರೆ. ಈ ಸಂದರ್ಭದಲ್ಲಿ ಯಾವುದೇ ಯುವಕರು ರಕ್ತದಾನ ಮಾಡಿ ರೋಗಿಯ ದೇಹಕ್ಕೆ ಪೂರೈಸಿದಲ್ಲಿ ಬೇರೆ ಯಾವ ಔಷಧಿಗಿಂತಲೂ ಶೀಘ್ರವಾಗಿ ರೋಗಿಯ ದೇಹದಲ್ಲಿ ಪ್ಲೇಟ್‌ಲೆಟ್‌ಗಳು ಉತ್ತಮ ರೀತಿಯಲ್ಲಿ ಹೆಚ್ಚಾಗಲು ಫಲಕಾರಿಯಾಗುತ್ತದೆ. ಒಬ್ಬ ರಕ್ತದಾನಿಯು ಸ್ವಯಂ ರಕ್ತದಾನ ಮಾಡಿ ಅವನ ದೇಹದಿಂದ ನೇರವಾಗಿ ರಕ್ತದಾನ ಮಾಡಿ ಅವನ ದೇಹದಿಂದ ನೇರವಾಗಿ ರಕ್ತದಲ್ಲಿರುವ ಪ್ಲೇಟ್‌ಲೆಟ್‌ನ ಕಣಗಳನ್ನು ಬೇರ್ಪಡಿಸಿ ಉಳಿದ ರಕ್ತವನ್ನು ದಾನಿಯ ದೇಹಕ್ಕೆ ಹಿಂದಿರುಗುವಂತೆ ಮಾಡುತ್ತಾರೆ. ಅದನ್ನು (SDP) ಎನ್ನುತ್ತಾರೆ. ಒಬ್ಬ ರಕ್ತ ದಾನಿಯ ಪ್ಲೇಟ್‌ಲೆಟ್‌ನ್ನು ಕೂಡಲೆ ರೋಗಿಯ ದೇಹಕ್ಕೆ ಪೂರೈಸಿದಲ್ಲಿ ರೋಗಿಯ ದೇಹದಲ್ಲಿರುವ ರಕ್ತದಲ್ಲಿ ಕಡಿಮೆ ಇರುವ ಪ್ಲೇಟ್‌ಲೆಟ್‌ಗಳು ಶೀಘ್ರದಲ್ಲಿಯೇ ಪರಿಪೂರ್ಣತೆಯನ್ನು ಹೊಂದುವ ಚಮತ್ಕಾರವನ್ನು ನೋಡಬಹುದು. ಆದ್ದರಿಂದ SDP ಯ ಅವಶ್ಯಕತೆ ಇಂದಿನ ದಿನಗಳಲ್ಲಿ ಬಹಳಷ್ಟು ರಕ್ತದ ಬೇಡಿಕೆ ಇರುವುದನ್ನು ನೋಡಬಹುದು.

ಆದ್ದರಿಂದ ಆದಷ್ಟು ಜನರಲ್ಲಿ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸಿ ರಕ್ತದಾನದ ಅಗತ್ಯತೆಯನ್ನು ಜನರಿಗೆ ಮನವರಿಕೆ ಮಾಡುವುದು ಬಹಳ ಪ್ರಾಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಹಲವಾರು ಸಂಘಸಂಸ್ಥೆಗಳು ಅದರಲ್ಲೂ ಭಾರತೀಯ ರೆಡ್‌ಕ್ರಾಸ್ ಬಹಳಷ್ಟು ಮುತುವರ್ಜಿ ತೆಗೆದುಕೊಳ್ಳುತ್ತಿವೆ ಮತ್ತು ಜನರಲ್ಲಿ ಹಾಗೂ ಯುವಕರಲ್ಲಿ ಜಾಗೃತಿ ಮೂಡಿಸಲು ಬೇರೆ ಬೇರೆ ರೀತಿಯಲ್ಲಿ ಉತ್ತೇಜಿಸುವುದಿಂದ ಆಪತ್ಕಾಲದಲ್ಲಿ ಎಷ್ಟೋ ಜೀವ ಉಳಿಸುವಂತಹ ಮಹತ್ಕಾರ್ಯಗಳನ್ನು ನೆರವೇರಿಸಬಹುದು.

ಈ ಬಗ್ಗೆ ವೈದ್ಯರು ಆಸ್ಪತ್ರೆಗಳು, ರಕ್ತದಾನ ಕೇಂದ್ರಗಳು ಅದೂ ಅಲ್ಲದೆ ಇದಕ್ಕೆ ಸಂಬಂಧಪಟ್ಟ ಎಲ್ಲಾ ಸಂಘಸಂಸ್ಥೆಗಳು ಬಹಳಷ್ಟು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೇವಲ ಡೆಂಗ್ಯೂ ಜ್ವರದಲ್ಲಿ ಬಳಲುತ್ತಿರುವವರಿಗೆ ಮಾತ್ರವಲ್ಲ ರಕ್ತದ ಅವಶ್ಯಕತೆ ಇರುವ ಎಲ್ಲಾ ರೋಗಿಗಳಿಗೆ ಅನುಕೂಲವಾಗುವಂತೆ ಹೆಚ್ಚಿನ ರೀತಿಯಲ್ಲಿ ಯುವಕರು ಮುಂದೆ ಬಂದು ರಕ್ತದಾನ ಮಾಡಿದಲ್ಲಿ ಮತ್ತು ಡೆಂಗ್ಯೂ ಜ್ವರದ ಬಗ್ಗೆ ಮನವರಿಕೆ ಜನರಿಗೆ ಮಾಡಿದಲ್ಲಿ ಸಾವಿರಾರು ಜನರ ಜೀವ ಉಳಿಸುವಲ್ಲಿ ಆಪತ್ಕಾಲದ ಬಾಂಧವರಾಗಬಹುದು.

## ಬಂಟರ ಯಾನೆ ನಾಡವರ ಮಾತೃಸಂಘ ಮತ್ತು ದೆಹಲಿಯ ಪ್ರತಿಷ್ಠಿತ ಚಾಣಕ್ಯ ಐ.ಎ.ಎಸ್ ಅಕಾಡೆಮಿಯ ಒಡಂಬಡಿಕೆ

ಮಂಗಳೂರಿನಲ್ಲಿ ಬಂಟರ ಯಾನೆ ನಾಡವರ ಮಾತೃಸಂಘದ ಸಹಯೋಗದೊಂದಿಗೆ ದೇಶದ ಪ್ರತಿಷ್ಠಿತ 'ಚಾಣಕ್ಯ ಐ.ಎ.ಎಸ್ ಅಕಾಡೆಮಿಯು' UPSC ಯ, I.A.S, I.F.S, I.R.S ಹಾಗೂ K.A.S ನ ತರಬೇತಿ ಕೇಂದ್ರವನ್ನು ಮಂಗಳೂರಿನಲ್ಲಿ ಆರಂಭಿಸಲು ಜೂನ್ ತಿಂಗಳ 29ರಂದು ಮಂಗಳೂರಿನಲ್ಲಿ ಒಡಂಬಡಿಕೆ ಮಾಡಿಕೊಂಡಿರುವರು.

ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾ ಸಂಸ್ಥೆಗಳ ವಠಾರದಲ್ಲಿ ಆಗಸ್ಟ್ ತಿಂಗಳಿನಿಂದ ಪ್ರಥಮ ಬ್ಯಾಚನ್ನು ಆರಂಭಿಸುವುದೆಂದು ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷರಾದ ಮಾಲಾಡಿ ಅಜಿತ್ ಕುಮಾರ್ ರೈಯವರು ಮತ್ತು ಚಾಣಕ್ಯ I.A.S ಅಕಾಡೆಮಿಯ C.E.O ಯ ಜಿನಿತ್ ಪುಷ್ಕರ್ಣರವರು ಒಡಂಬಡಿಕೆಗೆ ಸಹಿ ಮಾಡಿದರು.

ಈ ಸಂದರ್ಭದಲ್ಲಿ ಸೆನೆಗಲ್, ಬೆಹ್ರಿನ್ ಮತ್ತು ಸ್ವೀಡನ್ ಸಹಿತ ಹಲವು ದೇಶಗಳಲ್ಲಿ ರಾಯಭಾರಿಯಾಗಿದ್ದ ಶ್ರೀ ಬಾಲಕೃಷ್ಣ ಶೆಟ್ಟಿಯವರು ಉಪಸ್ಥಿತರಿದ್ದರು.

ಅಲ್ಲದೆ ಬಂಟರ ಯಾನೆ ನಾಡವರ ಮಾತೃ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ವಸಂತ ಶೆಟ್ಟಿ, ಮಂಗಳೂರು ತಾಲೂಕು ಸಮಿತಿಯ ಸಂಚಾಲಕರಾದ ಶ್ರೀ ಜಯರಾಮ ಸಾಂತ, ಸಹ ಸಂಚಾಲಕ ಉಮೇಶ್ ರೈ ಮತ್ತು ಶ್ರೀ ರಾಮಕೃಷ್ಣ ವಿದ್ಯಾ ಸಂಸ್ಥೆಗಳ ಸಂಚಾಲಕ ಶ್ರೀ ಕೃಷ್ಣಪ್ರಸಾದ್ ರೈ ಮತ್ತು ಇತರರು ಉಪಸ್ಥಿತರಿದ್ದರು.

# ವಿವಾಹ ವೇದಿಕೆ-ವಧು-ವರರ ಅನ್ವೇಷಣಾ ಸಮಾವೇಶ

**ದಿನಾಂಕ 10.12.2017, ಭಾನುವಾರ**
**ಪೂರ್ವಾಹ್ನ 10.00 ರಿಂದ**

ಸಂಘದ ವಿವಾಹ ವೇದಿಕೆ ಸಮಿತಿಯು ಹದಿನಾರನೇಯ ವಧು–ವರರ ಸಮಾವೇಶವನ್ನು ದಿನಾಂಕ 10.12.2017ರಂದು ಸಂಘದ ಆವರಣದಲ್ಲಿ ಆಯೋಜಿಸಲು ತೀರ್ಮಾನಿಸಿದೆ. ವಿವಾಹ ಯೋಗ್ಯ ವಯಸ್ಸಿನ ವಧು–ವರರು ಈ ಸಮಾವೇಶದಲ್ಲಿ ತಮ್ಮ ಪೋಷಕರೊಂದಿಗೆ ಭಾಗವಹಿಸಿ ಸಮಾವೇಶದ ಪ್ರಯೋಜನ ಪಡೆಯುವುದರೊಂದಿಗೆ ಕಾರ್ಯಕ್ರಮದ ಯಶಸ್ಸಿನಲ್ಲಿ ಪಾಲುದಾರರಾಗಬೇಕಾಗಿ ವಿನಂತಿ.

**"ನೀವೂ ಬನ್ನಿ, ನಿಮ್ಮ ಪರಿಚಯಸ್ಥರಿಗೂ ಈ ಸದಾವಕಾಶವನ್ನು ಉಪಯೋಗಿಸಿಕೊಳ್ಳುವಂತೆ ಪ್ರೇರೇಪಿಸಿ"**

# 16th MATRIMONIAL MEET

**Date: 10.12.2017, Sunday, 10.00 am**

The Matrimonial Committee of Bunts Sangha Bangalore has decided to arrange a Matrimonial Meet on 10th December 2017, from 10.00 am at Bunts Sangha Premises.

Prospective brides and bridegrooms are requested to attend this meet along with their parents so that they can make use of this opportunity to find suitable life partners for themselves. Please participate in large numbers and make the programme a grand success.

All the members are requested to support this programme not only by encouraging eligible candidates but also by giving wide publicity to this programme, so that maximum number of people from the community benefit.

**Santhosh Shetty J.**
Hon. Secretary

**Chandrahas Rai D.**
President

**Sudhakr Shetty S.**
Convener, Matrimonial Cell
Mob: 9845153302

**Shakila S. Shetty**
Chairperson, Matrimonial Cell
Mob: 9448249338

ಬಂಟರ ಸಂಘ ಬೆಂಗಳೂರು

# ಕ್ರೀಡಾ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ –2017–18

ಆತ್ಮೀಯ ಸದಸ್ಯರೇ,

ಬಂಟರ ಸಂಘವು ಪ್ರತೀ ವರ್ಷದಂತೆ ಈ ವರ್ಷವೂ ನಡೆಸುತ್ತಿರುವ ವಿಜೃಂಭಣೆಯ 2017–18 ಸಾಲಿನ **'ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ'**ಕ್ಕೆ ತಮ್ಮೆಲ್ಲರನ್ನೂ ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ. ಸದಸ್ಯರೆಲ್ಲರೂ ಕ್ರೀಡಾ ಮನೋಭಾವದಿಂದ ತಮ್ಮ ಕುಟುಂಬ ಸದಸ್ಯರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಮಯಕ್ಕೆ ಸರಿಯಾಗಿ ಆಗಮಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತಿದ್ದೇವೆ.

### ಕ್ರೀಡಾಕೂಟದ ವಿವರ

| | | | |
|---|---|---|---|
| ನವಂಬರ್ 05.11.2017 | ಉದ್ಘಾಟನೆ ಮತ್ತು ಅಥ್ಲೆಟಿಕ್ಸ್ | ಬೆಳಿಗ್ಗೆ 9.00ಕ್ಕೆ | ಸಾಯಿ ಮೈದಾನ, ಬೆಂಗಳೂರು ಯೂನಿವರ್ಸಿಟಿಯ ಹತ್ತಿರ |
| ನವಂಬರ್ 12.11.2017 | ಚೆಸ್, ಕೇರಂ ಹಾಗೂ ಟೆನ್ನಿಕ್ವಾಯಟ್ | ಬೆಳಿಗ್ಗೆ 9.00ಕ್ಕೆ | ಬಂಟರ ಸಂಘದ ಸಂಕೀರ್ಣ |
| ನವಂಬರ್ 19.11.2017 | ಶಟಲ್ ಬ್ಯಾಡ್ಮಿಂಟನ್ | ಬೆಳಿಗ್ಗೆ 9.00ಕ್ಕೆ | ಕೆನರಾ ಯೂನಿಯನ್, ಮಲ್ಲೇಶ್ವರಂ |
| ನವಂಬರ್ 25.11.2017 | ಕ್ರಿಕೆಟ್ | ಬೆಳಿಗ್ಗೆ 8.00ಕ್ಕೆ | ಬಿ.ಇ.ಎಲ್. ಮೈದಾನ ಜಾಲಹಳ್ಳಿ ಮತ್ತು ಎಚ್.ಎಂ.ಟಿ. ಮೈದಾನ |
| ನವಂಬರ್ 26.11.2017 | ಕ್ರಿಕೆಟ್ | ಬೆಳಿಗ್ಗೆ 8.00ಕ್ಕೆ | ಬಿ.ಇ.ಎಲ್. ಮೈದಾನ ಜಾಲಹಳ್ಳಿ ಮತ್ತು ಎಚ್.ಎಂ.ಟಿ. ಮೈದಾನ |
| ನವಂಬರ್ 26.11.2017 | ತ್ರೋಬಾಲ್ | ಬೆಳಿಗ್ಗೆ 9.00 ಕ್ಕೆ | ಬಿ.ಇ.ಎಲ್. ಮೈದಾನ ಜಾಲಹಳ್ಳಿ |
| ಡಿಸೆಂಬರ್ 16.12.2017 | ವಾಲಿಬಾಲ್(ಮಹಿಳೆಯರಿಗೆ/ಪುರುಷರಿಗೆ) | ಬೆಳಿಗ್ಗೆ 9.00 ಕ್ಕೆ | ಬಂಟರ ಸಂಘದ ಸಂಕೀರ್ಣ |

ಬೆಂಗಳೂರು ಬಂಟರ ಸಂಘದ 2017–18 ನೇ ಸಾಲಿನ ಎಲ್ಲಾ ವಾರ್ಷಿಕ ಕ್ರೀಡಾ ಸ್ಪರ್ಧೆಗಳಲ್ಲಿ (ಕ್ರಿಕೆಟ್ ಸಹಿತ) ಭಾಗವಹಿಸಲು ಇಚ್ಛಿಸುವವರು ಕಡ್ಡಾಯವಾಗಿ ಸಂಘದ ಸದಸ್ಯರಾಗಿದ್ದು (ಸದಸ್ಯರ ಮಕ್ಕಳನ್ನು ಹೊರತುಪಡಿಸಿ) ಸದಸ್ಯತ್ವ ಸಂಖ್ಯೆ ನಮೂದಿಸುವುದು ಕಡ್ಡಾಯ, ಸಮಾಜ ಭಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.

**ಸಂತೋಷ್ ಶೆಟ್ಟಿ ಜೆ.**
ಗೌ। ಕಾರ್ಯದರ್ಶಿ

**ಚಂದ್ರಹಾಸ ರೈ ಡಿ.**
ಅಧ್ಯಕ್ಷರು

**ಶ್ಯಾಮಲ ಶೆಟ್ಟಿ ಜೆ.**
ಸಂಚಾಲಕರು, ಕ್ರೀಡಾ ಸಮಿತಿ, ಮೊ:9845502964


**ಸುರೇಂದ್ರ ಶೆಟ್ಟಿ ಕೆ.**
ಛೇರ್‌ಮ್ಯಾನ್, ಕ್ರೀಡಾ ಸಮಿತಿ, ಮೊ:9980573270

**ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಸಮಿತಿಯ ಈ ಕೆಳಕಂಡ ಸದಸ್ಯರನ್ನು ಸಂಪರ್ಕಿಸಬಹುದು.**

**ನಿತ್ಯರಂಜನ್ ಹೆಗ್ಡೆ: 9945685277 /ಉಮೇಶ್ ಶೆಟ್ಟಿ: 9741220559/ರಂಜಿತ್ ಶೆಟ್ಟಿ: 9972251111/ ನವೀನ್ ಶೆಟ್ಟಿ:9844226700/ ದಿವ್ಯಪ್ರಸದ್ ಶೆಟ್ಟಿ: 9845646121/ ಸಂತೋಷ್.ಎಸ್.ಶೆಟ್ಟಿ:9845569949/ ಪ್ರಶಾಂತ್ ಹೆಗ್ಡೆ : 9900462217/ ಶರತ್ ಶೆಟ್ಟಿ : 9035632767/ ಸುರೇಂದ್ರ ಶೆಟ್ಟಿ.ಎಸ್ : 9663313685/ ಅನುಪ್ ಶೆಟ್ಟಿ : 9972094776/ನಿತೇಶ್ ಶೆಟ್ಟಿ : 9740157810**



MyCarAndBike Is India's Fastest Growing Car Buying Platform
MYCAR AND BIKE
www.mycarandbike.com
Get the Best Deals and Discounts on new cars in Bangalore
Getting A Deal Is Simple
1 Choose your car
2 Fill in your details
3 Get the Best deals
Contact Us: 90192 05205 | care@mycarandbike.com


ADVT.



ನಿಮ್ಮ ಶೈಕ್ಷಣಿಕ ಗುರಿಗಳನ್ನು
ವಿಜಯ ಬ್ಯಾಂಕ್‌ನೊಂದಿಗೆ ಸಾಧಿಸಿ
ವಿಜಯ ಶೈಕ್ಷಣಿಕ ಸಾಲ
• ಭಾರತದಲ್ಲಿ ವ್ಯಾಸಂಗಕ್ಕೆ ₹ 10 ಲಕ್ಷವರೆಗಿನ ಸಾಲ
• ವಿದೇಶಗಳಲ್ಲಿ ವ್ಯಾಸಂಗಕ್ಕೆ ₹ 20 ಲಕ್ಷಗಳವರೆಗಿನ ಸಾಲ
• ಅರ್ಹ ಅಭ್ಯರ್ಥಿಗಳಿಗೆ ಹೆಚ್ಚಿನ ಮಿತಿಯನ್ನು ಪರಿಗಣಿಸಲಾಗುವುದು.
• ಸುಲಭ ಕಂತುಗಳು
• ಅನುಕೂಲಕರ ಮರುಪಾವತಿ ಅವಧಿ 15 ವರ್ಷಗಳವರೆಗೆ (ಮೊರಟೋರಿಯಂ ಅವಧಿಯ ನಂತರ)
• ವಿದ್ಯಾರ್ಥಿನಿಯರಿಗೆ 0.5% ಬಡ್ಡಿದರಲ್ಲಿ ವಿನಾಯಿತಿ
• ವಿದ್ಯಾಲಕ್ಷ್ಮಿ ಜಾಲತಾಣದಿಂದ (www.vidyalakshmi.co.in) ಅರ್ಜಿಗಳನ್ನು ಸಲ್ಲಿಸಬಹುದು
• ಅರ್ಹ ವಿದ್ಯಾರ್ಥಿಗಳಿಗೆ ಬಡ್ಡಿ ರಿಯಾಯಿತಿ ಸಹಾಯ ಸೌಲಭ್ಯ ಲಭ್ಯವಿದೆ
ಇಂದೇ ಶಾಖೆಯನ್ನು ಸಂಪರ್ಕಿಸಿ!
*ಷರತ್ತುಗಳು ಅನ್ವಯ
ವಿಜಯ ಬ್ಯಾಂಕ್
VIJAYA BANK
(ಭಾರತ ಸರಕಾರದ ಒಂದು ಉದ್ಯಮ)
ನಿಮ್ಮ ವಿಶ್ವಾಸಾರ್ಹ ಸಂಗಾತಿ
ವಿಜಯ ಬ್ಯಾಂಕ್ ಮತ್ತು ನೀವು
ಈಗ 24 x 7 ಸಮಯವೂ ಸಂಪರ್ಕದಲ್ಲಿ...
ನಮಗೆ Hello ಹೇಳಿ:
स्वच्छ भारत
एक कदम स्वच्छता की ओर


ADVT.


केनरा बैंक
भारत सरकार का उपक्रम
Canara Bank
A Government of India Undertaking
Together We Can
We are blessed to begin
a new life with
Canara
Home Loan
Repayment upto 30 years
@ Low and Attractive Rate of Interest
*Conditions apply • Interest rate linked to MCLR
For more details kindly visit our nearest branch or website: www.canarabank.com
Consumer Awareness : Lodge a complaint with local police/cyber crime authorities immediately if you are harassed by telephone calls or emails offering you huge sums of money.
Scan for online facilities
Toll Free : 1800 425 0018
Save Trees. Save Water. Save Environment.
www.canarabank.com
ADVT.


A LANDMARK DELIVERED
PRESENTING MANGALURU'S
BEST LIFESTYLE PROJECT
SHOT AT LOCATION
BRIGADE
READY TO OCCUPY HOMES
1800 102 9977 | salesenquiry@brigadegroup.com
BRIGADE
PINNACLE
DEREBAIL MANGALORE

ADVT.



SINCE 1996
Nightingales
THE HOME HEALTH SPECIALIST
A Mahindra Collaboration
NIGHTINGALES DENTAL CLINIC
Now open in your living room.
With over 20 years of home health expertise backed by a protocol driven approach, we use state-of-the-art portable technology to provide quality dental treatment in the convenience of your home.
KEY BENEFITS OF DENTAL CLINIC BROUGHT HOME
Convenience of home
Avoid multiple visits to the clinic
Avoid travelling
Portable equipment brought home
Suitable option for the elderly
Privacy at home
EMI Available*
*T&C Apply
HOME-BASED DENTAL CARE SERVICES
Preventive Care
Root Canal Treatment
Dentures, Crowns & Bridges
Dental Assessments & Dental X-rays
Specialised Geriatric Care
Gum Treatments
Filling & Cosmetic Restorations
Braces Fitting
Medwell Ventures facilitates dental services through qualified dentists.
1800 103 4530
BENGALURU • HYDERABAD • MUMBAI • PUNE | www.nightingales.in

ADVT.



Creating
life-long bonds
18
Years
HOUSE FOR ALL
₹2,300/-
Budget Flats
15
₹2
MATHA
SAI MATHA
GARDEN
MATHA
MATHA
MATHA
7259209966, 9980711966, 7022481666, 7259269966
CREDAI


ADVT.


Prashasthi
Modular Interiors
ಪ್ರಶಸ್ತಿ ಮಾಡ್ಯುಲಾರ್ ಇಂಟೀರಿಯರ್ಸ್
Prop: Ramesh Shetty
Life !!


ADVT.

### ಬಂಟರ ಸಂಘ ಬೆಂಗಳೂರು
### ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ

# ಗಣೇಶ ಚತುರ್ಥಿ ಆಚರಣೆ

**ದಿನಾಂಕ: 25.08.2017, ಶುಕ್ರವಾರ**





ದಿನಾಂಕ 25.08.2017ನೇ ಶುಕ್ರವಾರದಂದು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ಪ್ರಾಂಗಣದಲ್ಲಿಗಣೇಶ ಚೌತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ನಮ್ಮ ಸಂಘದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನ ಅನುಗ್ರಹದಿಂದ ನಾವು ಆಯೋಜಿಸಿರುವ ಕೆಲವು ಮಹತ್ತರ ಕಾರ್ಯಗಳನ್ನು ಈಗಾಗಲೇ ನಿರ್ವಿಘ್ನವಾಗಿ ಪೂರ್ಣಗೊಳಿಸಲಾಗಿದೆ. ಒಂದು ಆಲೋಚನೆ ಹಲವಾರು ಉತ್ತಮ ಕಾರ್ಯಗಳಿಗೆ ಪ್ರೇರಣೆಯಾಗುತ್ತದೆ ಎಂಬುದು ಇದರಿಂದ ವಿಧಿತವಾಗುತ್ತದೆ. ಪೂರ್ವಾಹ್ನ 8.00 ಗಂಟೆಗೆ ಸರಿಯಾಗಿ ಸಂಘದ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈ ದಂಪತಿಗಳ ಪೂಜಾ ದೀಕ್ಷೆಯೊಂದಿಗೆ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ಕಟ್ಟೇರೆ ರತ್ನಾಕರ ಶೆಟ್ಟಿ ದಂಪತಿಗಳ ಹಾಗೂ ಸಾವಿರಾರು ಭಕ್ತರ ಉಪಸ್ಥಿತಿಯಲ್ಲಿ ಗಣಹೋಮವನ್ನು ನಡೆಸಲಾಯಿತು.

ಮಧ್ಯಾಹ್ನ 12.00 ಗಂಟೆಗೆ ಮಹಾಮಂಗಳಾರತಿ ನಡೆಯಿತು. ಶ್ರೀ ರವಿಶಂಕರ ಗುರೂಜಿ ಭಕ್ತ ವೃಂದದವರಿಂದ ಭಜನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಎಲ್ಲಾ ಪೂಜಾ ಕಾರ್ಯಕ್ರಮಗಳಲ್ಲಿ ಸಂಘದ ಮಾಜಿ ಅಧ್ಯಕ್ಷರುಗಳಾದ ಡಾ. ಎಂ.ಟಿ ರೈ, ಶ್ರೀ ಟಿ. ಅಮರನಾಥ ಹೆಗ್ಡೆ, ಶ್ರೀ ಭಗವಾನ್‌ದಾಸ್ ರೈ, ಡಾ। ನರೇಶ್ ಶೆಟ್ಟಿ ಮಾಜಿ ಪದಾಧಿಕಾರಿಗಳು, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಂಘದ ಹಾಲಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸಿ ಶ್ರೀ ವರಸಿದ್ಧಿ ವಿನಾಯಕ ದೇವರ ಕೃಪೆಗೆ ಪಾತ್ರರಾದರು. ಖ್ಯಾತ ಹರಿದಾಸ ಕೀರ್ತನಕಾರರಾದ ಡಾ॥ ವಿದ್ಯಾಭೂಷಣರವರ ಭಕ್ತಿಗಾನ ಸುಧೆ ಕಾರ್ಯಕ್ರಮವು ಜನ ಮೆಚ್ಚುಗೆಗೆ ಪಾತ್ರವಾಯಿತು.

**ಧರ್ಮೋ ರಕ್ಷತಿ ರಕ್ಷಿತಃ** – ಯಾರು ಧರ್ಮವನ್ನು ಕಾಪಾಡುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆಯಂತೆ. ಹಾಗೆ ಈ ಭಾರಿ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ಗಣೇಶೋತ್ಸವ ವಿಜೃಂಬಣೆಯಿಂದ ಜರುಗಿ ಬಂಟ ಸಮುದಾಯದ ಜೊತೆಗೆ ನಮ್ಮ ಪರಿಸರದ ಜನತೆ ಸೇರಿಕೊಂಡು ಒಂದು ಉತ್ಸವವೇ ನಡೆಯಿತು ಎಂದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಹಲವಾರು ದಾನಿಗಳು ನಮ್ಮೊಂದಿಗೆ ಕೈ ಜೋಡಿಸಿದ್ದಾರೆ. 1600ಕ್ಕೂ ಮಿಕ್ಕಿದ ಭಕ್ತಾದಿಗಳಿಗೆ ಪ್ರಸಾದ ಭೋಜನದ ವ್ಯವಸ್ಥೆಯನ್ನು ಸೇವಾ ಕೈಂಕರ್ಯ ರೂಪದಲ್ಲಿ ನೀಡಿದ ಖ್ಯಾತ ಹೋಟೆಲ್ ಉದ್ಯಮಿ ಹಾಗೂ ನಮ್ಮ ಸಂಘದ ಖಜಾಂಚಿಯವರಾದ ಶ್ರೀ ಆನಂದರಾಮ ಶೆಟ್ಟಿ ದಂಪತಿಗಳಿಗೆ ಅಭಿನಂದನೆಗಳು.



ಹೋಟೆಲ್ ಉದ್ಯಮಿ ಶ್ರೀ ಸುಧಾಕರ ಶೆಟ್ಟಿ (ಕೂಲ್ ಕಾರ್ನರ್) ದೇವಸ್ಥಾನಕ್ಕೆ ಪ್ರತೀ ವರ್ಷವೂ ಹೂವಿನ ಅಲಂಕಾರ ಮಾಡಿ ಕೊಡುತ್ತಿದ್ದು ಈ ವರ್ಷವೂ ಅವರೇ ಅದರ ಸಂಪೂರ್ಣ ವೆಚ್ಚವನ್ನು ಭರಿಸಿದ್ದಾರೆ.

ಖ್ಯಾತ ಕೃಷಿ ಉದ್ಯಮಿ, ಕೊಡುಗೈ ದಾನಿಗಳಾದ ಶ್ರೀಮತಿ ಸುಜಯ ಹಾಗೂ ಶ್ರೀ ಇರ್ಮಾಡಿ ಜಯಪ್ರಸಾದ ಶೆಟ್ಟಿ ದಂಪತಿಗಳು ದೇವಸ್ಥಾನಕ್ಕೆ ಮೊದಲಿನಿಂದಲೂ ಅಂದವಾದ ಚಪ್ಪರವನ್ನು ಹಾಕಿಕೊಡುವುದರ ಜೊತೆಯಲ್ಲಿ ಹಣದ ಸಹಾಯವನ್ನು ಮಾಡಿದ್ದಾರೆ.

ಕೊರ್ಗಿ ಭೋಜರಾಜ ಶೆಟ್ಟಿ ಹಾಗೂ ಮೋರ್ಟು ಶ್ರೀ ಚಂದ್ರಶೇಖರ ಶೆಟ್ಟಿ, ಐಶ್ವರ್ಯ ಫೈನಾನ್ಸ್ ಕೋರಮಂಗಲ ಇವರು ಲಡ್ಡು ಪ್ರಸಾದವನ್ನು ಒದಗಿಸಿಕೊಟ್ಟಿರುತ್ತಾರೆ.

**ಈ ಸಮಾರಂಭಕ್ಕೆ ಧನ ಸಹಾಯ ನೀಡಿದವರು:**

1. ಶ್ರೀ ಮುಲ್ಕಿ ನಾರಾಯಣ ಶೆಟ್ಟಿ ಖ್ಯಾತ ಉದ್ಯಮಿ
2. ಶ್ರೀ ಬಿ.ಎನ್ ಶೆಟ್ಟಿ,
3. ಶ್ರೀಮತಿ ಸುಜಯ ಹಾಗೂ ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ ದಂಪತಿಗಳು
4. ಶ್ರೀ ಸುಬ್ರಹ್ಮಣ್ಯ ಶೆಟ್ಟಿ ತಂತ್ರಾಡಿ, ಖ್ಯಾತ ಹೋಟೆಲ್ ಉದ್ಯಮಿ
5. ಶ್ರೀಮತಿ ಸರ್ವಾಣಿ ಗಿರೀಶ್ ರೈ, ಮಾಜಿ ಉಪಾಧ್ಯಕ್ಷರು
6. ಶ್ರೀ ದಿನಕರ ಶೆಟ್ಟಿ, ಹೆಚ್.ಎಸ್.ಆರ್ ಲೇಔಟ್
7. ಶ್ರೀ ರತ್ನಾಕರ ಶೆಟ್ಟಿ ಕೆ., ಕಾರ್ಯಕಾರಿ ಸಮಿತಿ ಸದಸ್ಯರು
8. ಶ್ರೀ ಬಾಲಾಜಿ ಸೂಡ, ಉದ್ಯಮಿಗಳು
9. ಡಾ। ಜಗದೀಶ್ ವಿ. ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
10. ಶ್ರೀ ಗೋಪಾಲ ಶೆಟ್ಟಿ, ಸ್ವಾತಿ ಗ್ರೂಪ್ಸ್
11. ಶ್ರೀಮತಿ ಶರ್ಮಿಳ ಎ. ಶೆಟ್ಟಿ
12. ಶ್ರೀ ಅಮರನಾಥ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
13. ಶ್ರೀ ವಿಜಯ ಜೆ. ಶೆಟ್ಟಿ ಹಾಲಾಡಿ, ಕಾರ್ಯಕಾರಿ ಸಮಿತಿ ಸದಸ್ಯರು
14. ಶ್ರೀ ದೀಪಕ್ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
15. ಶ್ರೀ ರಮಿತ್ ಬಿ. ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
16. ಶ್ರೀ ಶಿವಾನಂದ ಶೆಟ್ಟಿ ಟಿ., ಮಾಜಿ ಜಂಟಿ ಕಾರ್ಯದರ್ಶಿ
17. ಶ್ರೀಮತಿ ದೀಪಿಕಾ ಉಮೇಶ್ ಶೆಟ್ಟಿ
18. ಡಾ। ವೈ. ಉಮನಾಥ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
19. ಶ್ರೀ ಎಸ್. ಅಶೋಕ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
20. ಶ್ರೀ ಸಂತೋಷ್ ಜೆ. ಶೆಟ್ಟಿ, ಗೌರವ ಕಾರ್ಯದರ್ಶಿ
21. ಶ್ರೀ ಉಮೇಶ ಕುಮಾರ್ ಶೆಟ್ಟಿ, ಸದಸ್ಯರು, ಪ್ರಾರ್ಥನಾ ಮಂದಿರ ಸಮಿತಿ
22. ಶ್ರೀ ಕೆ. ನಾಗರಾಜ ರೈ, ರಾಜ್ ಇಲೆಕ್ಟ್ರಿಕಲ್ಸ್

ಈ ಎಲ್ಲಾ ಪೂಜಾ ಕಾರ್ಯಕ್ರಮಗಳಿಗೆ ಉದಾರ ದೇಣಿಗೆ ನೀಡಿ ಸಹಕರಿಸಿದ ದಾನಿಗಳನ್ನು ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಮ್ಮುಖದಲ್ಲಿ ಶಾಲು ಹೊದಿಸಿ, ಪ್ರಸಾದ ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಉಮೇಶ್ ಕುಮಾರ್ ಶೆಟ್ಟಿಯವರು ಅಚ್ಚು ಕಟ್ಟಾಗಿ ನಿರ್ವಹಿಸಿದರು.

ಈ ಮೇಲಿನ ದಾನಿಗಳು ದೇವತಾ ಕಾರ್ಯದಲ್ಲಿ ತಮ್ಮ ಹೃದಯ ವೈಶಾಲ್ಯತೆಯೊಂದಿಗೆ ತನು, ಮನ, ಧನ ಸಹಾಯಗೈದು ಭಗವಂತನ ಅನುಗ್ರಹಕ್ಕೆ ಪಾತ್ರರಾಗಿ ಕಾರ್ಯಕ್ರಮದ ಯಶಸ್ಸಿಗೆ ಕಾರಣೀಕರ್ತರಾಗಿದ್ದಾರೆ.

ಈ ದೇವತಾ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಭಕ್ತಾದಿಗಳಿಗೂ ಪ್ರಾರ್ಥನಾ ಮಂದಿರ ಸಮಿತಿಯ ಪರವಾಗಿ ವಂದನೆಗಳು.

**ಕೊರ್ಗಿ ಭೋಜರಾಜ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**ಶ್ರೀ ಕಟ್ಕೇರೆ ರತ್ನಾಕರ ಶೆಟ್ಟಿ**
ಚೇರ್‌ಮೆನ್, ಪ್ರಾರ್ಥನಾ ಮಂದಿರ ಸಮಿತಿ

## ಪ್ರಕಟಣೆ

**ಕಾರ್ಯಕಾರಿ ಸಮಿತಿಯ ನಿರ್ಧಾರದಂತೆ ಬೆಂಗಳೂರು ಬಂಟರ ಸಂಘದ ಇತಿಹಾಸದ ಬಗ್ಗೆ ಹಾಗೂ ನಡೆದು ಬಂದ ದಾರಿಯ ಬಗ್ಗೆ ಒಂದು "ಸಾಕ್ಷ್ಯ ಚಿತ್ರ"ವನ್ನು ಹೊರತರಲು ನಿರ್ಧರಿಸಲಾಗಿದೆ. ಈ ಕುರಿತು ಸಂಘದ ಸದಸ್ಯರಿಂದ ವಿಶೇಷ ಮಾಹಿತಿಗಳನ್ನು ಫೋಟೊ ಮತ್ತು ವಿಡಿಯೋ ಚಿತ್ರಣದ ಸಹಿತ ಕಳುಹಿಸಿಕೊಡಲು ಕೋರಲಾಗಿದೆ. ಮಾನ್ಯ ಸದಸ್ಯರು ವಿಶೇಷ ಘಟನೆಗಳ ಬಗ್ಗೆ ಸೂಕ್ತ ಮಾಹಿತಿಯನ್ನು ಆದಷ್ಟು ಶೀಘ್ರವಾಗಿ ಸಂಘದ ಕಛೇರಿಗೆ ಕಳುಹಿಸಿ ಕೊಡಲು ಕೋರಲಾಗಿದೆ.**

**ಎಸ್. ಅಶೋಕ್ ಕುಮಾರ್ ಶೆಟ್ಟಿ**
**ಅಧ್ಯಕ್ಷರು**
**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**

# THE SECRET OF HAVING A BETTER LIFE



T. Chandrashekar Shetty

Everyone in the world wants a better life but only a few would get it. The reason is not far beyond to seek. People who have Desire to succeed in life only develop faith in themselves to reach the highest level in life means Self-realization. However people who have Doubts in themselves develop fear instead of faith and pushed to the lowest level in life means Self-destruction.

Most of us are not aware of the fact that Desire is the source of action that creates the result we experience in life while Doubt is the source of inaction that allows our present results to be controlled by our past actions and we keep doing the same thing over and over again that creates the same results for the rest of our lives.

This is the way we get conditioned or programmed in life. Over 90% people belong to this group. Now most of us have been programmed to live the life of misery instead of living the way we want to live means a better or joyful life.

**Our Joy or misery depends on the choice we make in life.**

God has given the choice to every human being either to make his life joyful or miserable. Once our choice or Results is in harmony with our desire we become happy and successful or else we become unhappy and miserable. Our life can never change unless we make a new choice now because this is the power given to only humans by God to change their lives which is denied to all other living creatures in the world. Hence the man is considered as the highest form of God's creations means Master of the Universe because he has the power to create his own environment and circumstances while all other creatures in the Universe are comfortable in their existing environment.

According to Deepak Chopra the Spiritual Guru who wrote the famous book called "Seven Spiritual Laws of Success" our every action or karma is nothing but a choice we make in life. When our choice brings success and happiness to others the fruit of our karma brings success and happiness to ourselves. So, before you do anything in life be something means a better person. The Greatest Discovery made in human history is "You become what you think about most of the time"

Success is becoming the person you want to be, doing the things you love to do and having the kind of life you want to live to be happy and peaceful in every moment of your life.

Just imagine this situation for a moment. When you become a better person, you can do things in a better way then, you will have better results to make your life better. But if you keep doing the same thing every day how can you expect to have better results?.It is impossible.

"The greatest insanity among mankind is doing the same thing over and over again expecting different results" said Henry Ford.

**The great rule for Success is here:**

